MADRAS DISTRICT BOARDS (MYSORE AMENDMENT) BILL, 1958.

Motion to consider.

Sri R. CHENNIGARAMIAH (Minister for Local Self-Government).—Sir, I move :

"That the Madras District Boards (Mysore Amendment) Bill, 1958, be taken into consideration."

Mr. SPEAKER.—Motion moved :

"That the Madras District Boards (Mysore Amendment) Bill, 1958, be taken into consideration."

Sri R. CHENNIGARAMIAH.—This is a simple piece of legislation which is non-controversial and self-explanatory. The Government are forced to bring in this piece of legislation under inevitable circumstances. The term of the District Board, South Kanara, will expire on 27th October 1958 and the Government require at least one year more to introduce new legislation, that is, uniform law. Therefore, under the present circumstances we are bound to extend the term of the South Kanara District Board by one year. I request the Hon'ble Members to give their consent to this piece of legislation.

[SRI J. H. SHAMSUDDIN in the Chair].

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಮೈಸೂರ ಸಂಸ್ಥಾನದಲ್ಲಿಯ ಈ ಜಿಲ್ಲಾಬೋರ್ಡುಗಳ ವಿಚಾರದಲ್ಲಿ ಸ್ವಲ್ಪ ದುರ್ವಾಸನೆ ಎದ್ದಿದೆಯೆಂದು ಹೇಳಿದರೆ ತಪ್ಪಾಗಲಾರದು. ನಮ್ಮ ಹಳೆಯ ಮೈಸೂರಿನಲ್ಲಿ 1951ನೆಯ ಇಸವಿ ಎಪ್ರಿಲ್ 1ನೆಯ ತಾರೀಖಿನಿಂದ ಜಿಲ್ಲಾಬೋರ್ಡುಗಳಿಗೆ ಚುನಾಯಿತ ಮೆಂಬರುಗಳನ್ನು ತೆಗೆದುಹಾಕಲಾಯಿತು. ಹೋದ ಅಧಿವೇಶನದಲ್ಲಿ ಬೊಂಬಾಯಿ ಪ್ರದೇಶದಲ್ಲಿಯ ಜಿಲ್ಲಾ ಬೋರ್ಡುಗಳ ಅವಧಿಯನ್ನು ಮುಂದುವರಿಸಲಾಯಿತು. ಜಿಲ್ಲಾಬೋರ್ಡು ಆಕ್ಟನ್ನು ಜಾಗ್ರತೆ ತೆಗೆದುಕೊಂಡು ಬನ್ನಿ ಎಂದು ನಾನು ಹೇಳುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಜಿಲ್ಲಾ ಬೋರ್ಡುಗಳು ಜನೋಪಕಾರಿ ಕೆಲಸ ಮಾಡಿವೆ. ಆ ಕೆಲಸ ಈಗ ಹಾಳಾಗಿ ಹೋಗುತ್ತಿದೆ. ಕೋಟ್ಯಾಂತರ ರೂಪಾಯಿ ಹಾಳಾಗಿ ಹೋಗುತ್ತಿದೆ.ಬ ಹುಭಾಗದಲ್ಲಿ ರಸ್ತೆಗಳು ಉಪಯೋಗಕ್ಕೆ ಬಾರದಂತೆ ಆಗಿವೆ. ಕೊಡತಕ್ಕ ದುಡ್ಡನ್ನು ಸರಕಾರ ಕೊಟ್ಟಿಲ್ಲ, ಸರಕಾರ ದುಡ್ಡು ಕೊಡದೆ ಜಿಲ್ಲಾ ಬೋರ್ಡುಗಳು ಕೆಲಸಮಾಡಲು ಶಕ್ಯವಿಲ್ಲ, ಯಾವ ಒಂದು ರೀತಿಯಿಂದ ಕೆಲಸ ನಡೆಯಬೇಕಾಗಿತ್ತೋ ಆ ರೀತಿ ಕೆಲಸ ನಡೆಯುತ್ತಿಲ್ಲ. ಇಂತಹ ಸಂದರ್ಭದಲ್ಲಿ ಮತ್ತೊಂದು ಕಾನೂನನ್ನು ತೆಗೆದುಕೊಂಡು ಬಂದಿದ್ದೀರಿ. ಕಾನೂನು ಪ್ರಕಾರ ಅವರು ಹೇಳುವ ರೀತಿಯಲ್ಲಿ ಜಿಲ್ಲಾ ಬೋರ್ಡುಗಳ ಅವಧಿ ಅಕ್ಟೋಬರ್ 1958ಕ್ಕೆ ಮುಗಿಯುತ್ತದೆ. ಜಿಲ್ಲಾಬೋರ್ಡುಗಳಿಗೆ ಚುನಾವಣೆ ನಡೆಸಬೇಕೆಂಬ ವಿಚಾರದಲ್ಲಿ ಸರಕಾರಕ್ಕೆ ಎಳ್ಳಷ್ಟೂ ಇಷ್ಟವಿಲ್ಲವೆಂದು ಕಾಣುತ್ತದೆ. 1953ನೆಯ ಇಸವಿಯ ಬಜೆಟ್ ಅಧಿವೇಶನದಲ್ಲಿ ಆಗ್ಗೆ ಮಹಾರಾಜರು ಆಗಿದ್ದವರು ಒಂದು declaration ಕೊಟ್ಟು ಅಕ್ಟೋಬರ್ ತಿಂಗಳ ಅಖೈರಿಗೆ ಜಿಲ್ಲಾ ಬೋರ್ಡುಗಳ ಎಲೆಕ್ಷನ್ ನಡೆಸುತ್ತೇವೆಂದು ಅಸೆಂಬ್ಲಿಯಲ್ಲಿ ಆಶ್ವಾಸನ ಕೊಟ್ಟರು. ಆರೀತಿ ಮತ್ತೊಂದು ಕಮಿಟಿಯನ್ನು ಮಾಡಿದರು. ಈಗ ಅಧಿಕಾರ ಬಂದಕೂಡಲೇ ತಾವೇ ಸರ್ವಜ್ಞ ಆಗಿದ್ದೇವೆಂದು ತಿಳಿದುಕೊಳ್ಳುವುದು ಒಂದು ಲೋಕರೂಢಿಯಾಗಿರುತ್ತದೆ, ಅದಕ್ಕೋಸ್ಕರ ಇಷ್ಟೆಲ್ಲಾ ಹೇಳಬೇಕಾಗಿದೆ. ದಕ್ಷಿಣ ಕನ್ನಡದಲ್ಲಿ ಜಿಲ್ಲಾ ಬೋರ್ಡಿನ ಅವಧಿಯನ್ನು ಮುಂದುವರಿಸುವದಾದರೂ ಏಕೆ ? ಮೈಸೂರು ಸಂಸ್ಥಾನದಲ್ಲಿ ಎರಡು ವರ್ಷಗಳಲ್ಲಿ ಜಿಲ್ಲಾ ಬೋರ್ಡುಗಳ ಒಂದು ಕಾನೂನು ಆಗುವ ಸಂಭವವಿಲ್ಲ ಎಂಬ ಭಾವನೆ ಬರುವಂತೆ ಆಗಿದೆ. ಜಿಲ್ಲಾ ಬೋರ್ಡಿನ ಒಂದು ಕಾನೂನು ಮಾಡಲು ಎರಡು ವರ್ಷ ಅವಧಿ ಬೇಕಾಗುತ್ತದೆಯೇ ? ಅಸೆಂಬ್ಲಿ ಪ್ರಾರಂಭವಾದಂದಿನಿಂದ ಎಷ್ಟೋ ಕಾನೂನುಗಳನ್ನು ಈ ಸಭೆಯಲ್ಲಿ ಪಾಸುಮಾಡಲಾಗಿದೆ. ಎಷ್ಟೋ ಹೊಸ ತೆರಿಗೆಗಳನ್ನು ವಿಧಿಸಲಾಗಿದೆ. ಎಲ್ಲರಿಗೂ ಬೇಕಾಗಿರುವ ಜಿಲ್ಲಾ ಬೋರ್ಡುಗಳ ಆಡಳಿತಕ್ಕೆ ಅನುಕೂಲವಾಗುವ ಒಂದು ಕಾನೂನನ್ನು ಪಾಸುಮಾಡಲು ಶಕ್ತಿ ಇಲ್ಲವೆಂದರೆ ಏನು ? ನನಗೆ ಆಶ್ಚರ್ಯವಾಗುತ್ತದೆ. ಇಲ್ಲಿಯವರೆಗೆ ಜಿಲ್ಲಾ ಬೋರ್ಡುಗಳಿಗೆ ನಾಮಕರಣಮಾಡಿ ಒಬ್ಬ ಸರಕಾರಿ ನೌಕರನ ವಶಮಾಡಿಬಿಟ್ಟಿದ್ದೀರಿ. ಆದುದರಿಂದ ಜಿಲ್ಲಾ ಬೋರ್ಡುಗಳ ಕಾನೂನನ್ನು ಜಾಗ್ರತೆ ಈ ಸಭೆಯ ಮುಂದೆ ತರುವುದಕ್ಕೆ ಆಗುವದಿಲ್ಲ, ಶಕ್ತಿಇಲ್ಲ ಎಂದು ಹೇಳುವದಕ್ಕೆ ಆಗುವದಿಲ್ಲ. ಮುಂದುವರಿಸುವ ಹವ್ಯಾಸಕ್ಕೆ ಬಿದ್ದಿದ್ದೀರಿ. ಜಿಲ್ಲಾ ಬೋರ್ಡುಗಳು ಮಾಡಬೇಕಾಗಿದ್ದ ರಸ್ತೆ, ಬಾವಿ, ಆಸ್ಪತ್ರೆ ಮುಂತಾದ ಎಲ್ಲಾ ಕೆಲಸಗಳೂ ಅದ್ಯಾವನಾವಾಗಿ ದುಡ್ಡು ಖರ್ಚಾಗಿ ಹಾಳಾಗಿಹೋಗುತ್ತಿದೆ. ನಾನು ಈ ಮನೂದೆಯನ್ನು ವಿರೋಧಿಸುತ್ತಿರುವುದು ಜಿಲ್ಲಾ ಬೋರ್ಡುಗಳಿಗೆ ಚುನಾಯಿತ ಸದಸ್ಯರು ಇರಬಾರದು ಎಂಬ ಉದ್ದೇಶದಿಂದ ಅಲ್ಲ. ಆದರೆ ಜಾಗ್ರತೆಯಾಗಿ ಜಿಲ್ಲಾ ಬೋರ್ಡುಗಳ ಒಂದು ಕಾನೂನನ್ನು ಈ ಸಭೆಯ ಮುಂದೆ ತಂದು ಪಾಸು ಮಾಡಿಕೊಂಡು 1958ನೆಯ ಅಕ್ಟೋಬರ ಅದರೊಳಗಾಗಿ ಚುನಾವಣೆಗಳನ್ನು ನಡೆಸಿ ಜಿಲ್ಲಾ ಬೋರ್ಡುಗಳಲ್ಲಿ ಚುನಾಯಿತ ಸದಸ್ಯರು ಕೆಲಸ ಮಾಡುವಂತೆ ಮಾಡಬೇಕೆಂದೂ ಶೀಘ್ರವಾಗಿ ಧೇಶಕ್ಕೆ ಕಲ್ಯಾಣವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ; ಮತ್ತು ಹಾಗೆ ಮಾಡುವರೆಂದು ನಾನು ನಂಬಿದ್ದೇನೆ.

5 P.M.

ಶ್ರೀ ಜಿ. ಪಂಚಚೇಗ್ರೌಡ (ಪಾಳಯಂ).—ಮಾನ್ಯ ಅಧ್ಯಕ್ಷರೇ, ಈ ಮನೂದೆಯನ್ನು ನಾನು ತೀವ್ರವಾಗಿ ವಿರೋಧಿಸಬೇಕಾಗಿದೆ. ಏಕೆಂದರೆ, ನಮ್ಮ ಮಾನ್ಯ ಸಚಿವರು ಹೇಳಿದರು, ಅಲ್ಲಿ ಚುನಾಯಿತರಾದ ಸದಸ್ಯರಿದ್ದಾರೆ, ಅವರಿಗೇ ಜೀವದಾನ ಕೊಡುವುದಕ್ಕೆ ಇದನ್ನು ತಂದಿದ್ದಾಗಿದೆ ಎಂದು. ಕಾನೂನಿನ ಪ್ರಕಾರವೇ ಚುನಾವಣೆಯಾದ ಸದಸ್ಯರನ್ನೇ ಮೂರು

ಸಾರಿ ಮೂರುವರ್ಷಗಳ ಕಾಲ ಜೀವದಾನ ಕೊಟ್ಟು ಮುಂದುವರಿಸುವುದಕ್ಕೆ ಅವಕಾಶವಿರುವಾಗ ಈರೀತಿ ಮತ್ತೆ ಎರಡುವರ್ಷ ಜೀವದಾನ ಕೊಡಬೇಕೆಂದು ಕೇಳಿರುವುದು ಪ್ರಜಾಪ್ರಭುತ್ವದ ನೀತಿಗೇ ಸರಿಯಲ್ಲ ವೆಂದು ಹೇಳಬೇಕಾಗಿದೆ. ಏಕೆಂದರೆ ಈಗಿರತಕ್ಕ ಸದಸ್ಯರು ಚುನಾಯಿತ ಸದಸ್ಯರೇ ಆಗಿದ್ದರೂ ಅವರಿಗೆ ಇನ್ನೂ ಜನತೆಯ ವಿಶ್ವಾಸವಿದೆಯೇ ಇಲ್ಲವೇ ಎಂಬುದನ್ನು test ಮಾಡುವುದಕ್ಕೆ ಕೂಡ ಅವಕಾಶ ವಿಲ್ಲದಂತೆ ಈ ಮಸೂದೆಯನ್ನು ತಂದಿದ್ದಾರೆ.

ಇನ್ನೊಂದು ವಿಷಯವೇನೆಂದರೆ, ಈಗ ಈ ಮಸೂದೆ ಯನ್ನು ತಂದಿರುವುದು, ಈ ಸಂಬಂಧದಲ್ಲಿ ಸಂಸ್ಥಾನದ ಗವರ್ನರಿಂದ ಒಂದು ಆರ್ಡಿನೆನ್ಸ್ ಸಾದರಾಗಿ 27ನೆಯ ಅಕ್ಟೋಬರ್ 1958ರ ವರೆಗೆ ಆ ಜಿಲ್ಲಾ ಬೋರ್ಡಿಗೆ ಜೀವದಾನ ಕೊಟ್ಟಿದೆ, ಆ ಆರ್ಡಿನೆನ್ಸನ್ನು replace ಮಾಡುವುದಕ್ಕೆ ಇದನ್ನು ತರಲಾಗಿದೆ ಯೆಂದು ಹೇಳಿದ್ದಾರೆ. ಹಾಗೆ ಒಂದುವೇಳೆ replace ಮಾಡುವುದಕ್ಕೆ ತಂದಿದ್ದರೂ ಕೂಡ ಆರ್ಡಿನೆನ್ಸ್‌ನಲ್ಲಿ ಏನಿತ್ತೋ ಅಷ್ಟನ್ನು ಮಾತ್ರ ಈ ಮಸೂದೆಯಲ್ಲಿ ತರಬೇಕಾಗಿತ್ತು. ಅದು ಬಿಟ್ಟು ಆರ್ಡಿನೆನ್ಸ್‌ನಲ್ಲಿ ಇಲ್ಲದಿರುವುದನ್ನು ಮಸೂದೆಯಲ್ಲಿ ತರುವುದೆಂದರೆ, ಆರ್ಡಿನೆನ್ಸ್‌ಅನ್ನು ಸಾದರುಮಾಡುವ ನೀತಿಗೇ ವಿರೋಧವಾಗುತ್ತದೆಂದು ಹೇಳುತ್ತೇನೆ. ಆರ್ಡಿ ನೆನ್ಸ್‌ನಲ್ಲಿ 27ನೆಯ ಅಕ್ಟೋಬರ 1958ರ ವರೆಗೂ ಜೀವದಾನ ಕೊಡಬೇಕೆಂದಿದೆ. ಈ ಮಸೂದೆಯಲ್ಲಿ ಮತ್ತೆ ಎರಡು ವರ್ಷಗಳವರೆಗೂ ಮುಂದುವರಿಸಲು ಅವಕಾಶ ಕೇಳಿದ್ದೀರಿ. ಇದು ಸಂಪ್ರದಾಯಕ್ಕೆ ವಿರೋಧ ; ನ್ಯಾಯದೃಷ್ಟಿಯಿಂದಲೂ sustainable ಆಗುವುದಿಲ್ಲ, ಆದ್ದರಿಂದ ಈ ಸಭೆಯಲ್ಲಿ ಮಂಡಿಸಲು ಅರ್ಹತೆ ಪಡೆಯುವುದಿಲ್ಲವೆಂದು ನಾನು ಹೇಳುತ್ತೇನೆ. ಇನ್ನೊಂದು ಪ್ರಶ್ನೆಯನ್ನು ನಾನು ಮಂತ್ರಿಗಳನ್ನು ಕೇಳಬಯಸುತ್ತೇನೆ. ಮಾನ್ಯಮಂತ್ರಿಗಳು, ಪುನರ್ರಚಿತ ಮೈಸೂರು ಸಂಸ್ಥಾನದ ಜಿಲ್ಲಾ ಬೋರ್ಡುಗಳಿಗೆ ಅನ್ವಯಿಸುವಂತೆ ಕಾನೂನು ಮಾಡುವುದಕ್ಕೆ ಇನ್ನೂ ಎರಡು ವರ್ಷಗಳಕಾಲ ಬೇಕೇ ಎಂಬುದನ್ನು ವಿವಿಧ ಪ್ರದೇಶಗಳಿಂದ ಬಂದಿರುವ ಜನತೆಯ ದೃಷ್ಟಿ ಯಿಂದ, ಇದೊಂದೇ ವಿಷಯದಲ್ಲಲ್ಲ ಎಲ್ಲ ವಿಷಯ ಗಳಿಗೂ ಸಂಬಂಧಪಟ್ಟಂತೆ ಒಂದು ಸಮನ್ವಯ ಮಾಡುವ ಕಾನೂನನ್ನು ಇದುವರೆಗಾಗಲೇ ಮಾಡಿ ಮುಗಿಸಬೇಕಾಗಿತ್ತು. ಅದನ್ನು ಮಾಡದಿದ್ದುದರಿಂ ದಲೂ ಅವರ ಕರ್ತವ್ಯದಲ್ಲಿ ಚ್ಯುತಿಯುಂಟಾಗಿದೆ ಯೆಂದು ನಾನು ಹೇಳಬಯಸುತ್ತೇನೆ. ಕಾನೂನು ಮಂತ್ರಿಗಳು ಮೆಜಾರಿಟಿ ಅಭಿಪ್ರಾಯಕ್ಕೆ ಮೈನಾರಿಟಿ ಅಭಿಪ್ರಾಯಕ್ಕೆ ಎಷ್ಟರಮಟ್ಟಿಗೆ ಮನ್ನಣೆ ಕೊಡುತ್ತಾ ರೆಂಬುದು ತಿಳಿದೇಇದೆ. ಮೈನಾರಿಟಿಯವರು ಒಂದು ಒಳ್ಳೆಯ ಅಭಿಪ್ರಾಯ ಕೊಟ್ಟಾಗ, ಅದಕ್ಕೆ ಸರ್ಕಾರ ಮನ್ನಣೆ ಕೊಟ್ಟರೆ ಪ್ರಜಾಪ್ರಭುತ್ವ ಸರಿಯಾಗಿ ಕೆಲಸ ವಾ ಡು ವು ದ ಕ್ಕೆ ಸಾ ಧ್ಯ ವಾ ಗು ತ್ತ ದೆ ಂದು ಹೇಳುತ್ತೇನೆ. ಆಗಲೇ ಪ್ರಜಾಪ್ರಭುತ್ವ ಪ್ರಗತಿ ಹೊಂದೀತು ಎಂದು ಹೇಳುತ್ತೇನೆ. ಅದಿಲ್ಲ ದಿದ್ದರೆ ಪ್ರಜಾಪ್ರಭುತ್ವ ನೀತಿಗೆ ಕೊಲೆ ಖಂಡಿತ. ಪ್ರಜಾಭಿಪ್ರಾಯಕ್ಕೆ ಯಾವರೀತಿ ಮನ್ನಣೆ ಕೊಡುತ್ತಾ ರೆಂಬುದು ಇದನ್ನು ನೋಡಿದರೆ ಗೊತ್ತಾಗುತ್ತದೆ. ಇದುವರೆಗೂ ಏನೋ ಈ ಸರ್ಕಾರ ಜನತೆಯ ಮೂಲ ಭೂತ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಪಡು ತ್ತದೆ, ಜನರು ಶಾಂತಿಯಿಂದ ಇರುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತದೆ ಎಂಬ ಭರವಸೆಯಿತ್ತು. ಆದರೆ ಇಂದು ಇವರು ತಂದಿರುವ ಮಸೂದೆಯನ್ನು ನೋಡಿ ದರೆ, ಆ ಭರವಸೆಯನ್ನು ನಿರರ್ಥಕ ಗೊಳಿಸಿದಂತಾಗು ತ್ತದೆ. ಈ ಸರ್ಕಾರದ ನೀತಿಯಿಂದ ಪ್ರಜಾಪ್ರಭು ತ್ವದ ಉಲ್ಲಂಘನೆಯಾಗುತ್ತಿದೆ. ಈ ಭಾಗಗಳು ಮದರಾಸ್ ಪ್ರಾಂತ್ಯದಲ್ಲಿದ್ದಾಗ ಮಿಕ್ಕ ಭಾಗ ಗಳಂತೆಯೇ ತಾತ್ಕಾಲಿಕವಾಗಿ ಆಗ್ಗೆ ಅಲ್ಲಿದ್ದ ಕಾನೂನನ್ನು ಮುಂದುವರಿಸಲಾಗಿತ್ತು. ಅಲ್ಲಿಂದೀಚೆಗೆ ಮದರಾಸ್ ಸರ್ಕಾರದವರು ತಮ್ಮಲ್ಲಿರುವ ಮಿಕ್ಕ ಭಾಗಗಳ ವಿಷಯ ದಲ್ಲಿ ಈಗಾಗಲೇ ಒಂದು ವ್ಯವಸ್ಥಿತ ಕಾನೂನನ್ನು ಮಾಡಿಕೊಂಡಿದ್ದಾರೆ. ಹೀಗಿರುವಾಗ ಈ ಭಾಗಗಳು ಮೈಸೂರಿಗೆ ಬಂದ ಮೇಲೆ ಅದೇರೀತಿ ಏಕೆ ಇಲ್ಲಿ ಮಾಡ ಲಾಗಲಿಲ್ಲವೋ ಗೊತ್ತಾಗುವುದಿಲ್ಲ. ಇದನ್ನು ನೋಡಿದರೆ ಈ ಸರ್ಕಾರ ಈ ಪ್ರಜಾಪ್ರಭುತ್ವಯುಗದಲ್ಲಿ ಪ್ರಜಾಪ್ರಭುತ್ವಕ್ಕೆ ಎಷ್ಟರಮಟ್ಟಿಗೆ ಮನ್ನಣೆಕೊಡುತ್ತದೆಂಬುದು ವ್ಯಕ್ತ ಪಡುತ್ತದೆ. ಇವರು ಬಂದಮೇಲೆ ಸುಖೀ ರಾಜ್ಯ ಸ್ಥಾಪನೆ ಮಾಡುತ್ತಾರೆ, ರಾಮರಾಜ್ಯ ಸ್ಥಾಪನೆ ಮಾಡುತ್ತಾರೆ ಎಂಬ ಭರವಸೆ ಜನತೆಗಿತ್ತು, ರಾಮ ರಾಜ್ಯದಲ್ಲಿ ರಾಮನು ರಾಜನಾದರೂ ಪ್ರಜಾಪ್ರಭು ತ್ವವೇ ಅದಾಗಿತ್ತು, ಪ್ರಜೆಗಳ ಒಂದು ಅಭಿಪ್ರಾಯಕ್ಕೆ, ಅದು ಸತ್ಯಕ್ಕೇ ದೂರವಾಗಿದ್ದರೂ ಕೂಡ, ಸಾಮಾನ್ಯ ಪ್ರಜೆಯ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕೆಂದು ಹೇಳಿ ಸೀತೆಯನ್ನು ರಾಮನು ಕಾಡಿಗೆ ಕಳುಹಿಸಿ ಬಿಟ್ಟನು. ಹೀಗಿರುವಾಗ ಇಲ್ಲಿ ಇಷ್ಟೊಂದು ಜನರೂ ಪ್ರಜಾಪ್ರಭುತ್ವಕ್ಕೆ ಧಕ್ಕೆಯುಂಟಾಗುತ್ತಿದೆಯೆಂದು ಹೇಳುತ್ತಿದ್ದರೂ ಸರ್ಕಾರದವರು ಮನ್ನಣೆ ಕೊಡದಿರುವುದು ಶೋಚನೀಯವಾಗಿದೆ. ಆರ್ಡಿನೆನ್ಸ್‌ಗೆ ವಿರುದ್ಧವಾಗಿರತಕ್ಕ ಅಂಶವನ್ನು ಈ ಮಸೂದೆಯಲ್ಲಿ ನಮೂದಿಸಿರುವುದರಿಂದ, ಈ ಮಸೂದೆ ಇಲ್ಲಿ ಇಡು ವುದಕ್ಕೆ ಅರ್ಹವಾಗಿಲ್ಲ. ಒಂದು ವೇಳೆ ಆರ್ಡಿನೆನ್ಸ್ ನಲ್ಲಿರುವಂತೆಯೇ ಮಸೂದೆಯನ್ನು ತಂದಿದ್ದರೆ ಚೆನ್ನಾ ಗಿತ್ತು. ಆದ್ದರಿಂದ ಇದನ್ನು ನಾನು ತೀವ್ರವಾಗಿ ವಿರೋಧಿಸಿ ಸರ್ಕಾರದವರು ಈರೀತಿ ಆರ್ಡಿನೆನ್ಸ್‌ನಲ್ಲಿ ಸೇರದಿರತಕ್ಕ ಅಂಶವನ್ನು ಮಸೂದೆಯಾಗಿ ತರಬಹುದೇ ಎಂಬ ಅಂಶವನ್ನು ಕೂಲಂಕಷವಾಗಿ ಪರಿಶೀಲಿಸ ಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಸಭಾಪತಿಗಳೇ, ನಿಜವಾಗಿಯೂ ಒಂದು ವಿಚಾರ ನಮ್ಮ ಮನಸ್ಸಿನಲ್ಲಿ ಇದ್ದುದು ಈಗ ಜ್ಞಾಪಕಕ್ಕೆ ಬರುತ್ತದೆ. ಏನೆಂದರೆ ಈ ಮಂತ್ರಿಗಳು ನಿಜವಾಗಿ ಮಾತಿಗೆ ತಪ್ಪುವುದರಲ್ಲಿ ನಿಸ್ಸೀಮರು. ಹಿಂದೆ ಇದೇ ವಿಧವಾದ ಒಂದು ಬಿಲ್ ಬಂದಿದ್ದಾಗ ಮುಂದಿನ ಮಾರ್ಚಿಯವೇಳೆಗೆ ಎಲ್ಲಾ ಕಾನೂನುಗಳನ್ನೂ ಸಮೀ ಕರಣಮಾಡಿ ಬಿಲ್‌ಗಳನ್ನು ಈ ಸಭೆಯ ಮುಂದಿಡುತ್ತೇ ವೆಂದು ಹೇಳಿ, ಆಗ್ಗೆ, ಏನೋ ಒಂದು ಸಾರಿ extend ಮಾಡುವುದಕ್ಕೆ ಅನುಮತಿಕೊಡಿ ಎಂದು ಕೇಳುವುದಕ್ಕೆ ಇಷ್ಟೇಕೆ ವಿರೋಧ ಮಾಡುತ್ತೀರಿ, ಇದು ನ್ಯಾಯವೇ ಎಂದು ಕೇಳಿದರು. ಹೀಗಿದ್ದೂ ಈಗ ಮತ್ತೆ ಇದೇ ತರಹ ಬಿಲ್ ಬಂದಿದೆ. ಇದೂ ಅಲ್ಲದೆ, ಮಂತ್ರಿಗಳು ಒಂದು Press Statement ಕೂಡ ಕೊಟ್ಟಿದ್ದರು, ಜಿಲ್ಲಾ ಬೋರ್ಡ್‌ಗಳನ್ನು ವಜಾಮಾಡಿ, ತಾಲ್ಲೂಕ್ ಬೋರ್ಡ್‌ಗಳನ್ನು ನೇಮಿಸುತ್ತೇವೆ ಎಂದು. ಆ ಸ್ಟೇಟ್‌ಮೆಂಟ್ ಏನಾಯಿತೋ ಗೊತ್ತಿಲ್ಲ. ಇವನ್ನೆಲ್ಲಾ ನೋಡಿದರೆ, ಹಿಂದೆ ಶ್ರೀಮಾರ್ ಭೀಮಪ್ಪ ನಾಯಕರು ಹೇಳಿದಹಾಗೆ, ಲಘು Statement ಗಳು ಯಾವುವೋ, Serious Statement ಗಳು ಯಾವುವೋ, faulty Statementಗಳು ಯಾವುವೋ ಎಂದು ಗೊತ್ತುಮಾಡಿ ಕೊಳ್ಳುವುದೇ ಕಷ್ಟವಾಗುತ್ತದೆ. ಮಂತ್ರಿಗಳು

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಸ್ಪೇಟ್‌ಮೆಂಟನ್ನು ಕೊಡುವಾಗ ಅವರ ಜವಾಬ್ದಾರಿ ಎಷ್ಟು ಎಂಬುದನ್ನು ತಿಳಿದುಕೊಳ್ಳಬೇಕು. ಅವರ ಮಾತುಗಳು ಇಡೀ ದೇಶಕ್ಕೆ ಅನ್ವಯಿಸುವ ಮಾತಾಗಿರುತ್ತವೆ. ಇಂಥವುಗಳನ್ನು ನಾವು ಅಷ್ಟು ಲಘುವಾಗಿ ತೆಗೆದುಕೊಂಡರೆ ದೇಶದಲ್ಲಿ ವಾಸ್ತವವಾಗಿ ಸತ್ಯ, ನ್ಯಾಯ ಒಂದೂ ಇರುವುದಿಲ್ಲ.

ಈ ಹೊತ್ತು ಕೆಲವು ಕಡೆ ಡಿಸ್ಟ್ರಿಕ್ಟ್ ಬೋರ್ಡಿನ ಸ್ಥಿತಿ ಏನಾಗಿದೆಯೆಂಬುದನ್ನು ಹೇಳುತ್ತೇನೆ. ಎಕ್ಸ್ಚೆಸ್ ಬಾಬಿನಿಂದ ಹತ್ತಾರು ಲಕ್ಷ ರೂಪಾಯಿಗಳು ಬರುತ್ತಿದ್ದದ್ದು ನಿಂತುಹೋಗಿ ಡಿಸ್ಟ್ರಿಕ್ಟ್ ಬೋರ್ಡುಗಳು ನಿರ್ಜೀವವಾಗಿವೆ. ಇನ್ನು ಕೆಲವು ಕಡೆ ಚುನಾಯಿತ ಸದಸ್ಯರೆಲ್ಲಾ ವಜಾ ಆಗಿ ನಾಮಕರಣ ಸದಸ್ಯರು ಸೇರಿಕೊಂಡು ತಮಗೆ ಮನಸ್ಸಿಗೆ ಬಂದಹಾಗೆ ನಡೆಸುತ್ತಿದ್ದಾರೆ.

Mr. CHAIRMAN (Sri J. H. Shamsuddin).—Is this the state of affairs in South Kanara or elsewhere, because we are dealing with South Kanara ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹೀಗೆಯೇ ಸೌತ್ ಕೆನರಾ ಡಿಸ್ಟ್ರಿಕ್ ಬೋರ್ಡಿನಲ್ಲಿಯೂ ಕೂಡ ಅಲ್ಲಿ ಚುನಾಯಿತ ಸದಸ್ಯರಿದ್ದರೂ ಕೂಡ ಅವರನ್ನೇ ಇನ್ನೂ ಎರಡುವರ್ಷಕಾಲ ಮುಂದುವರಿಸುತ್ತೇವೆಂದು ಹೇಳಿರುವುದರಲ್ಲಿ ಏನು ಅಡಕವಾಗಿದೆಯೋ, ಅಲ್ಲಿ ತಮಗೆ ಬೇಕಾದವರು, ತಮ್ಮ ಪಕ್ಷಕ್ಕೆ ಸೇರಿದವರೇ ಹೆಚ್ಚಿಗೆ ಇದ್ದಾರೋ ಏನೋ ಗೊತ್ತಿಲ್ಲ. ಈ ಹೊತ್ತು ಆಡಳಿತದಲ್ಲಿ ಅನೇಕ ತರದ ಡಿಸ್ಟ್ರಿಕ್ಟ್‌ಬೋರ್ಡ್ ತಾಲ್ಲೂಕ್ ಬೋರ್ಡ್ ಕಾನೂನುಗಳಿರುವುದರಿಂದ, ಎಷ್ಟು ತೊಂದರೆಗಳಾಗಿವೆಯೆಂಬುದನ್ನು ಪರಿಗಣಿಸಿದರೆ, ಒಂದೊಂದು ಪ್ರಾಂತ್ಯದ ಭಾಗಕ್ಕೂ ಒಬ್ಬೊಬ್ಬ ಡೆಪ್ಯುಟಿ ಸೆಕ್ರೆಟರಿಯನ್ನು ನೇಮಿಸಬೇಕಾಗಿ ಬಂದಿದೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ, ಜಿಲ್ಲಾ ಬೋರ್ಡ್ ರಸ್ತೆಗಳು, ಆಸ್ಪತ್ರೆಗಳು, ಸ್ಕೂಲುಗಳು ಶಿಥಿಲ ಸ್ಥಿತಿಗೆ ಬಂದಿವೆ ಅಲ್ಲನ ನೌಕರರೋ ಹೇಗಿದ್ದರೂ ಜಿಲ್ಲಾ ಬೋರ್ಡ್‌ಗಳು ವಜಾ ಆಗುತ್ತವೆ, ಹೇಗೋ ಹಾಗೆ ಕೆಲಸ ದಭಾಯಿಸಿಕೊಂಡು ಹೋಗೋಣ ಎಂದು ಶ್ರದ್ಧೆವಹಿಸಿ ಕೆಲಸ ಮಾಡುತ್ತಿಲ್ಲ. ಹೀಗಾಗಿ ಜಿಲ್ಲಾ ಬೋರ್ಡಿನಲ್ಲಿ. ಈಗ ಭದ್ರತೆ ತಪ್ಪಿಹೋಗಿದೆ. ಈ ಹಿಂಪೆ, ಸೌತ್ ಕೆನರಾ ಜಿಲ್ಲೆಗೆ ಬರುವ ಮಾರ್ಚಿ ತಿಂಗಳಿನೊಳಗೆ ಒಂದು ಕಾನೂನು ತಂದು ಅಸೆಂಬ್ಲಿಯ ಮುಂದಿಟ್ಟು ಪಾಸ್ ಮಾಡಿಸಿಕೊಂಡು ಚುನಾವಣೆಯನ್ನು ಮುಂದಿನ ವರ್ಷ ನಡೆಸುತ್ತೇವೆಂದು ಕೊಟ್ಟ ಭರವಸೆಯೇನಾಯಿತು ? ಸರ್ಕಾರದಲ್ಲಿ ನಿಜವಾಗಿಯೂ ಕಾನೂನು ಸಮಾಕರಣ ಮಾಡಿ ಬಿಲ್ ತಯಾರುಮಾಡುವ ಜನರೇ ಇಲ್ಲವೇ ? ಆರ್ಡಿನೆನ್ಸ್ ಗಳೇನಿದ್ದರೂ ದೇಶದಲ್ಲಿ ಒಂದು ವಿಶೇಷ ಸಂದರ್ಭವೊದಗಿ, ಕ್ಷಾಮವೆದ್ದು ಅನಿವಾರ್ಯಸ್ಥಿತಿ ಬಂದಾಗ, ಮಾಡುವುದು ಸಂಪ್ರದಾಯ. ಈ ಜಿಲ್ಲಾ ಬೋರ್ಡಿನ ವಿಷಯದಲ್ಲಿ ಈಗ ಬಂದಿರುವ ಆರ್ಡಿನೆನ್ಸ್ ಮೂರನೆಯ ಬಾರಿಯದು. ಎರಡುಸಾರಿ ಅವಧಿ ಹೆಚ್ಚಿಸಿ, ಈಗ ಮೂರನೆಯಸಾರಿ ಮತ್ತೆ ಹೆಚ್ಚಿಕೆಗೆ ನಮ್ಮ ಮುಂದಿಡುತ್ತಿದ್ದೀರಿ. ಆರ್ಡಿನೆನ್ಸ್‌ನ ಅಧಿಕಾರವಿದೆಯೆಂದು ಹೇಳಿ ಪದೇ ಪದೇ ಹೀಗೆ ಆರ್ಡಿನೆನ್ಸ್‌ಗಳನ್ನು ಉಪಯೋಗಿಸುತ್ತಿದ್ದರೆ ಅದರ ಉದ್ದೇಶವೇ ಹೋಯಿತು. ನಿಜವಾದ ಪ್ರಜಾಪ್ರಭುತ್ವದ ತತ್ವವನ್ನು ಮುರೆತು ಆರ್ಡಿನೆನ್ಸ್‌ನಲ್ಲಿ ಹಕ್ಕಿದೆಯೆಂದು ಅದು ಉಪಯೋಗಿಸಿಕೊಳ್ಳುತ್ತಾ ಈ ಸಭೆಯ ಅಧಿಕಾರವನ್ನು ನೀವು ಕುಂಠಿತಗೊಳಿಸುತ್ತಿದ್ದೀರಿ ಎಂದರೆ ತಪ್ಪಾಗಲಾರದು. ಈಗಲಾದರೂ ಶ್ರೀಮಾನ್ ವೆಂಕಟೇಗೌಡರು ಹೇಳಿದಹಾಗೆ 1958ರ ಆಖ್ಯೆರ್‌ವರೆಗೂ ಇರುವ ಅವಕಾಶದಲ್ಲೇ ಒಂದು ಬಿಲ್ಲನ್ನು ತಂದು ಪಾಸ್ ಮಾಡಿಸಿಕೊಂಡು ಚುನಾವಣೆ ನಡೆಸುತ್ತಾರೆಂದು ತಿಳಿದಿದ್ದೆವು. ಅಂಥಾದ್ದನ್ನು ಈಗ ಎರಡು ವರ್ಷ ಮುಂದುವರಿಸಬೇಕೆಂದು ಹೇಳುತ್ತಿದ್ದಾರೆ. ಇದನ್ನು ನೋಡಿದರೆ ಮುಂದೆ ಜಿಲ್ಲಾಬೋರ್ಡ್ ಕಾನೂನು ಬರುವುದೇ ಅನುಮಾನವೆನಿಸುತ್ತದೆ. ಹೊಸ ಜಿಲ್ಲಾಬೋರ್ಡ್‌ಗಳನ್ನು ನೋಡುವುದೂ ಕೂಡ ದುರ್ಲಭವೋ ಎಂದು ತೋರುತ್ತದೆ. ಎರಡು ವರ್ಷಗಳ ಅವಕಾಶ ಕೇಳಿರುವುದನ್ನು ನೋಡಿದರೆ ನಿಜವಾಗಿಯೂ ಸರ್ಕಾರದವರು ಜಾಗ್ರತೆಯಾಗಿ ದೇಶದ ಎಲ್ಲ ಭಾಗಗಳಿಗೂ ಅನ್ವಯಿಸುವಂಥ ಒಂದು ಕಾನೂನನ್ನು ತಂದು ಅಂಗೀಕಾರ ಪಡೆಯುತ್ತಾರೆಂದು ತುಂಬ ಅನುಮಾನವಾಗಿದೆ. ಆದ್ದರಿಂದ ಈ ಮಸೂದಾ ಕಾನೂನನ್ನು ತೀವ್ರವಾಗಿ ವಿರೋಧಿಸುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಪ್ರಜಾಭಿಪ್ರಾಯ ತಿಳಿದುಕೊಂಡು ಅಕ್ಟೋಬರ್‌ನೊಳಗಾಗಿ ಬೇರೊಂದು ಬಿಲ್ಲನ್ನು ತಯಾರಿಸಿ ನಮ್ಮ ಮುಂದೆ ಇಡುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

Sri J. B. MALLARADHYA (Nanjangud).—Sir, it was a matter of great surprise for me to find the complacent attitude with which my friend the Hon'ble the Minister for Local Self-Government has brought this Bill before this House. He said that it is a very innocuous and simple Bill and that it would readily get the support of the House. He was probably banking on the support of the members of the other side, but certainlynot of the Opposition. There does not seem to be any decisive attitude on the part of the Treasury Benches. They are indecisive even in matters which vitally concern the interests of the people in rural areas. The question of reconstitution of District Boards and trying to have an altered set up of Local Boards is hanging fire for the last five years. Even after 1½ years of integration, this Government has not taken a decision on this subject. In fact, Sir, even the Ordinance issued by the Governor does not seem to be respected by this Ministry. After all, for the issue of an Ordinance, it is the Ministry that is responsible. It would not be incorrect if I say that these ordinances are issued by the Governor as head of the State on the advice of his Ministry by merely signing on the dotted line. It is the Ministry who

advise. As stated by Sri Rajaiah Setty, we seem to be in the regime of ordinances for anything and everything. It does not redound to the credit of any administration to continue this sad state of affairs and particularly this popular Government which came into power. As the Leader of the Opposition said, after the District Boards ceased to function, administration in those parts is in a chaotic condition. In fact it is my personal experience . . .

Sri B. VAIKUNTA BALIGA.—In South Kanara, it is not my experience.

Sri J. B. MALLARADHYA.—I do not know whether the Speaker has given a ruling that we should not speak on the subject with reference to the old Mysore State. In trying to bring a Bill . . .

Mr. CHAIRMAN.—I have not given any ruling. But as the subject relates to the extension of the term of period of the District Board in Mangalore, the debate should be confined to the state of affairs in Mangalore. But of course, by way of illustration, if the members want to say that the Government at present are following dilatory tactics in respect of all boards, that is all right.

Sri J. B. MALLARADHYA.—I am thankful to the Hon'ble Speaker for clarifying what I was going to refer to. Exactly I am actually referring to the dilatory tactics adopted by the Government in regard to this particular District Board directly and indirectly also to get time for coming to a decision. A few days ago, the Hon'ble Minister for Local Self-Government has stated during his tour in some district that it was under contemplation to abolish the district boards and introduce taluk boards or some other kind of panchayat board for administration. Whatever it is, I think with a view to respecting the ordinance issued by the Governor I would advise the Hon'ble Minister to take immediate action. It is the paramount duty of Government to see that local administration is a living reality. The present sad state of affairs has to be ended with a sense of determination.

To one important fact, I would like to invite the attention of the Government. I should like to have an assurance from the Treasury Benches that even after a period of two years, the same state of affairs will not be allowed to continue. I ask, what is the guarantee that they will not come again with such an extension Bill. We have lost all confidence in their *bona fides* to see that something is done in the reconstitution of the District Boards. That is why we are opposing. After all, asking for the extension of the life of a particular Board is not a very important thing in itself and it is within our powers to extend the same. But we do not want this question to crop up again in the same manner. We do not want this Government to adopt dilatory tactics. In view of this I want the Hon'ble Minister . . .

Sri R. CHENNIGARAMIAH.—The Hon'ble Member may see that the period counts from 27th October 1957 and not from now.

Sri J. B. MALLARADHYA.—Once again, it will not be much more than 1½ years. Is it to the credit of any Government and particularly a popular Government in a Democracy to take such a long time to take action in such a simple matter? They may come to some decision that the district boards should be abolished and the taluk boards should be introduced. They do not seem to be sure of themselves and there seems to be some indecision some where and I do not know whether it is in the cabinet stage or in the party stage. I do not know what exactly is the matter. In fact, people outside Mysore State are looking at us with a kind of disdain and contempt that we are indecisive. People in the border areas on the other side come to some quick decision on all matters and it is we who delay. It is in view of that I oppose this Bill.

In respect of South Kanara itself, I want to know why the Government have not made any mention in the Statement of Objects and Reasons whether it is the intention of the people in the District Board of South Kanara that their term should be extended. Is it in response to the popular will that this measure is brought before the House? Why should they not hold

(SRI J. B. MALLARADHYA)

elections ? This is not stated in the Statement of Objects and Reasons. As my friend Sri Venkatai Gowda said, is it because they want to favour a particular set of people to be in charge of the Board that this extension is sought for ? In a Democracy it should not be like that. Even now, if they want, they have got time to hold elections and get an elected body to the District Board in Mangalore. This kind of patronage and nepotism is what I condemn in local administration. In view of all these factors I oppose this Bill and I request the Hon'ble Minister for Local Self-Government to withdraw this Bill and to see that something is done and a definite decision is taken by the Cabinet in regard to this important matter.

Sri H. C. LINGA REDDY (Malur).— Sir, while supporting the Madras District Boards (Mysore Amendment) Bill, I wish to state that my friends in the opposition have not read the Statement of Objects and Reasons. For their benefit and with your permission, I will read one sentence from the same :

> "The question of abolition of District Boards and establishment of new local Bodies instead is under consideration and pending the enactment of the law for the purpose, the term of the District Board, South Kanara, was extended until 27th October 1958 by virtue of the Madras District Boards (Mysore Amendment) Ordinance, 1958 promulgated on 18th January 1958 amending section 11 (1-A) of the Madras Act."

As Hon'ble Members are aware, whether district boards as such should be replaced and whether any elections should be held for District Boards, etc., the whole thing is in the melting pot. Hon'ble Members may remember that the Venkatappa Committee had recommended that there should be indirect elections. Subsequently, there was a good deal of agitation both outside and also on the floor of the House that there should be direct elections, and the whole process took nearly three or four years. Subsequently, it was felt very strongly not merely in this State but also elsewhere, both outside and on the floor of several legislatures, that the district boards have outlived their purpose and the time has come when it has to be seriously thought whether we should have District Boards specially in view of the fact that there will be what are called development Boards in the several districts according to the scheme laid down by the Planning Commission.

Hon'ble Members will remember that even in Madras and Andhra Pradesh this is very seriously thought of and it is considered that these District Boards have to be abolished. Nothing else can be done with them. We are aware that the general elections are held every five years; they tax the people very seriously. This is a very serious burden on the District Boards also, because elections will have to be held under adult franchise. The financial conditions of the District Boards are such that they cannot afford to spend 2 lakhs, 3 lakhs and 5 lakhs on these elections. If elections have to be organised under adult franchise as it is done in the case of general elections which we will be having once in five years, it will be too much of a burden to the candidates and too much of a financial strain on the slender finances of the District Boards. We know that the District Boards now are not in a self-sufficient position. They are not in a position to pay for the hospitals, or the schools and they are not in a position to pay for the doctors and nurses and therefore they cannot undertake any new venture. After all, they are continuing what was started years and years ago. Under these circumstances, if elections have to be held under adult franchise in the several taluks, I am afraid the finances of the District Boards will be starved and they will not be in a position to pay for the doctors and nurses, for the school teachers, nor to maintain even roads. The Planning Commission had given a new scheme called Development Boards or Councils. All these schemes have to be integrated and a committee at the district level has to be thought of. My Hon'ble friends on

the Opposition side were accusing Government again and again that they were adopting dilatory tactics and all that. If the Venkatappa Committee recommended indirect elections and subsequently the Legislature felt that the recommendations were not proper and that it should have direct elections, and again it was felt by the public and the Members of this House that time has come when it has to be very seriously considered whether we should have District Boards at all, when we should consider whether the District Boards have not outlived their purpose, it is not the fault of the Government. After all, what is it that is recommended in this Bill? In the original section, the Government has only taken power to extend the period for a term not exceeding two years. If these words are carefully read, I am sure they will feel that the Government should have proposed at least five years instead of two years. I therefore request the Hon'ble Members on the Opposition to read the Bill as well as the annexure.

With these few words, I support the Bill, Sir.

ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಸಭಾಪತಿಗಳೆ, ಈಗ ತಂದಿರತಕ್ಕಂಥ ಮನೂದೆಯನ್ನು ಬಲವಾಗಿ, ಆಳವಾಗಿ, ಗಂಭೀರವಾಗಿ ನಾನು ವಿರೋಧಮಾಡುತ್ತಾ ಇದ್ದೇನೆ. ಏತಕ್ಕೆಂದರೆ ನಮ್ಮ ಭಾಗದಲ್ಲಿ 1952ನೆಯ ಇಸವಿಯಿಂದ ಲೋಕಲ್ ಬೋರ್ಡುಗಳ ಚುನಾವಣೆ ನಡೆದಿಲ್ಲ. ಹೋದವರ್ಷ, ಒಂದು ವರ್ಷ ಚುನಾವಣೆಯನ್ನು ಮುಂದಕ್ಕೆ ಹಾಕಿ, ಜೀವದಾನ ಕೊಟ್ಟರು. ಜೀವದಾನ ಕೊಡುವುದು ಪರಮಾತ್ಮನ ಕೆಲಸ. ಅದನ್ನು ಮನುಷ್ಯ ಮಾಡುವುದಕ್ಕಾಗುವುದಿಲ್ಲ. ಜೀವದಾನ ಮಾಡುವ ಸಂದರ್ಭ ಬರಬೇಕಾದರೆ ಎಲ್ಲಿಯಾದರೂ ಕಾಲರ, ಪ್ಲೇಗು, ಪ್ಲೂ ಅಥವಾ ಇನ್ನೇನಾದರೂ ಬಲವಾದ ಕಾರಣವಿರಬೇಕು. ಅಂತಹ ಸಮಸ್ಯೆ ಈಗ ಯಾವುದೂ ಇಲ್ಲ. ಆಹಾರ ಸಮಸ್ಯೆ ಅಥವಾ ಬರಗಾಲದ ಪರಿಸ್ಥಿತಿ ಇರಬೇಕು. ಇವು ಯಾವುವೂ ಇಲ್ಲ. ಎಲ್ಲರೂ ಆರಾಮವಾಗಿ ಇದ್ದಾರೆ. ಮಂತ್ರಿಗಳೂ ಸೌಖ್ಯವಾಗಿದ್ದಾರೆ.

ಈ ಚುನಾವಣೆಗಳನ್ನು ಮುಂದೆ ಹಾಕುವುದಕ್ಕೆ ಇನ್ನು ಯಾವ ಉದ್ದೇಶವೂ ಇಲ್ಲ. ಅದಕ್ಕೆ ಒಂದೇ ಒಂದು ಉದ್ದೇಶ ಕಾಣುತ್ತದೆ; 20-25 ವರ್ಷದ ಯುವಕನಿಗೆ ದೇವರು 28 ವರ್ಷದವರೆಗೆ ಜೀವದಾನ ಕೊಡಬಹುದು. ಆದರೆ, ಸ್ವಾಮಿ, ಈ ಸ್ಥಳೀಯ ಸಂಸ್ಥೆಗಳಿಗೆ 99ವರ್ಷ ವಯಸ್ಸಾಗಿ ಸಾಯುವ ಸ್ಥಿತಿಯಲ್ಲಿರುವಾಗ, ಅವುಗಳಿಗೆ ಜೀವದಾನ ಕೊಟ್ಟರೆ ಏನು ಪ್ರಯೋಜನ? ಈವಾಗ ಜೀವದಾನ ಮಾಡಬೇಕಾದುದು ನಿಮ್ಮ ಕರ್ತವ್ಯವಲ್ಲ. ಜೀವದಾನ ಕೊಡಬೇಕಾದದು ದೇವರು. ನೀವೇ ಜೀವದಾನ ಕೊಡುವುದಾದರೆ, ದೇವರು ಏತಕ್ಕೆ ಇರಬೇಕು? ದೇವರು ರಜ ತೆಗೆದುಕೊಂಡು ಹೋಗಲಿ.

Mr. CHAIRMAN.—Similarity may be given to some extent. But it should not be carried too far.

ಶ್ರೀ ಬಿ. ಕೆ. ನಾಗೂರ್.—ಸ್ವಾಮಿ, ಜೀವದಾನ ಎನ್ನುವ ಶಬ್ದ ಇಲ್ಲಿ ಪರ್ಯಾಲೋಚಿಸುತ್ತಿರುವ ಪರಿಸ್ಥಿತಿಗೆ ಸಂಬಂಧಪಟ್ಟದ್ದು. ಈ ಕಾರಣದಿಂದ ಆ ಪದವನ್ನು ಉಪಯೋಗಿಸುತ್ತಿದ್ದೇನೆ. ಚುನಾವಣೆ ಮುಂದಕ್ಕೆ ಹಾಕುವ ಉದ್ದೇಶವಿದ್ದರೆ, ಸರ್ಕಾರದವರು ಅದಕ್ಕೆ ಕಾರಣಗಳನ್ನು ಜನರಿಗೆ ತಿಳಿಸಲಿ. ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಿದರೆ, ಕಾಂಗ್ರೆಸ್ಸಿನವರಿಗೆ ಸೋಲು ನಿಶ್ಚಯ. ಇದು ಒಂದೇ ಕಾರಣದಿಂದ ಚುನಾವಣೆಯನ್ನು ಮುಂದಕ್ಕೆ ಹಾಕಲಾಗುತ್ತಿದೆ; ಬೇರೆ ಕಾರಣವಿಲ್ಲ. ಬೇರೆ ಬೇರೆ ಕಡೆಗಳಲ್ಲಿ ಎಷ್ಟೋ ಕಾಂಗ್ರೆಸ್ಸಿನ ಜನರು ಸೋತಿದ್ದಾರೆ. ಇದೇ ಹೆಚ್ಚಿನ ಕಾರಣ. ಈಗ ಬಿಜಾಪುರದಲ್ಲಿರತಕ್ಕಂಥ ಲೋಕಲ್ ಬೋರ್ಡ್ ಅಧ್ಯಕ್ಷರು ಕಾಂಗ್ರೆಸ್ ಪಕ್ಷದ ಜನ. ಅವರು ಇನ್ನೂ ತಮಗೆ ಬೇಕಾದ ಊರಿನಲ್ಲಿ ರಸ್ತೆ ಮಾಡಿಸಿಕೊಳ್ಳಲಿಕ್ಕೆ ಬೇಕು; ಮತ್ತು ಇತರ ಅನುಕೂಲತೆಗಳನ್ನು ದೊರಕಿಸಿಕೊಳ್ಳಬೇಕು. ಆದ್ದರಿಂದ ಈ ಚುನಾವಣೆ ಮುಂದಕ್ಕೆ ಹೋಗಬೇಕು. ಜನರ ಹಿತದೃಷ್ಟಿಯಿಂದ ಇದು ಮುಂದಕ್ಕೆ ಹೋಗುವ ಉದ್ದೇಶವಿಲ್ಲ ಎಂದು ಸ್ಪಷ್ಟವಾಗಿ ಕಾಣುತ್ತದೆ. ಈ ಸಭೆಯಲ್ಲಿ ವಿರೋಧ ಪಕ್ಷದಲ್ಲಿ 59 ಸದಸ್ಯರು ಇದ್ದಾರೆ. ಈಗ ಚುನಾವಣೆ ನಡೆಸಿದರೆ ತಮ್ಮ ಜನರಾದ ಕಾಂಗ್ರೆಸ್ಸಿಗರು ಖಂಡಿತವಾಗಿಯೂ ಜಯಶೀಲರಾಗುವುದಿಲ್ಲ ಎಂಬ ಬಲವಾದ ಅಂಜಿಕೆಯಿಂದ ಚುನಾವಣೆಯನ್ನೇ ಮುಂದಕ್ಕೆ ಹಾಕುತ್ತಿದ್ದೀರಿ. ಇನ್ನಾವ ಉದ್ದೇಶವೂ ತಮಗಿಲ್ಲ. ಸರ್ಕಾರಕ್ಕೆ ಈ ಅಂಜಿಕೆ ಇಲ್ಲದೇ ಇದ್ದರೆ, ಚುನಾವಣೆಗಳನ್ನು ಏಕೆ ಮಾಡಬಾರದಾಗಿತ್ತು? ಹೋದವರ್ಷ, ಒಂದು ವರ್ಷವಾಗುತ್ತಲೂ ಚುನಾವಣೆ ನಡೆಸುವುದಾಗಿ ಹೇಳಿದ್ದಿರಿ. ಚುನಾವಣೆಯನ್ನು ಮುಂದೆ ಹಾಕುವ ಪರಿಸ್ಥಿತಿ ಈಗಿಲ್ಲ. ಒಂದು ಅಂಜಿಕೆಯಿಂದ, ನಿಮ್ಮ ಜನ ಚುನಾವಣೆಯಲ್ಲಿ ಬರುವುದಿಲ್ಲ ಎಂಬ ಸ್ಪಷ್ಟವಾದ ಅಂಜಿಕೆಯಿಂದ; ಈ ಮನೂದೆಯನ್ನು ತಂದ್ದಿದ್ದೀರಿ. ಮಾನ್ಯ ಮಂತ್ರಿಗಳು ತೀಪ್ರವಾಗಿ ಈ ಲೋಕಲ್ ಬೋರ್ಡುಗಳಿಗೆ ಚುನಾವಣೆ ಏರ್ಪಡಿಸುವ ಪರಿಸ್ಥಿತಿಯನ್ನು ಯೋಚಿನೆಮಾಡಬೇಕು. ನಾನು ಈ ಮನೂದೆಗೆ ಬಲವಾದ ವಿರೋಧವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಆರ್. ಜೆನ್ನಿಗರಾಮಯ್ಯ.—ನಾನು ಚರ್ಚೆಯಲ್ಲಿ intervene ಮಾಡಿ ಒಂದು ವಿಷಯವನ್ನು ತಿಳಿಸಿದರೆ ಹೆಚ್ಚು ಚರ್ಚೆಗೆ ಅವಕಾಶವಿರುವುದಿಲ್ಲವೆಂದು ಭಾವಿಸುತ್ತೇನೆ. ಆದುದರಿಂದ ಒಂದು ವಿಚಾರವನ್ನು ತಿಳಿಸುತ್ತೇನೆ.

ಶ್ರೀಮಾನ್ ಮಲ್ಲಾರಾಧ್ಯರು ಮಾತನಾಡುತ್ತ ಸರ್ಕಾರದವರು ಇನ್ನೂ definite policy ತೆಗೆದುಕೊಂಡಿಲ್ಲ, ಎರಡುವರ್ಷ ಕಾಲ ಮುಂದುವರಿಸುವುದೆಂದರೆ ಮತ್ತೆ ಅದನ್ನು ಮುಂದುವರಿಸುವುದಕ್ಕೆ ಅವಕಾಶವಿದೆ, ಬೇರೆ ಭಾಗದವರು definte policy ಮಾಡಿದ್ದಾರೆಂದು ಒಂದು ರೀತಿಯಲ್ಲಿ ಹೇಳಿದರು. ಬಿಲ್ಲಾ ಬೋರ್ಡ್ ವಿಚಾರದಲ್ಲಿ ಎಲ್ಲರಿಗೂ ಅನಮಾಧಾನವಾಗಿದೆ; ನಮಗೂ ಅನಮಾಧಾನವಾಗಿದೆ. ಜಿಲ್ಲಾ ಬೋರ್ಡ್‌ಗಳಿಗೆ ಚುನಾವಣೆಗಳನ್ನು ನಡೆಸಬೇಕಾದುದು ನಾನಾ ಕಾರಣಗಳಿಂದ, ನಮಗೂ ಅವರಿಗೂ ಎಟಿಮೀರಿದ ಕಾರಣಗಳಿಂದ ಈ ರೀತಿ ಪೋಸ್ಟ್‌ಪೋನ್ ಆಗುತ್ತಿದೆ. ಇದಕ್ಕೆ ಯಾರೂ ಕಾರಣರಲ್ಲ. ಈಗಿರುವ

(ಶ್ರೀ ಆರ್. ಚೆನ್ನಿಗರಾಮಯ್ಯ)

ಜಿಲ್ಲಾ ಬೋರ್ಡುಗಳ ಅವಧಿಯನ್ನು extend ಮಾಡಿ ಕೊಂಡು ಹೋಗಬೇಕೆಂಬ ಇಷ್ಟ ಯಾರಿಗೂ ಇಲ್ಲ. ಜಿಲ್ಲಾ ಬೋರ್ಡ್ ಮತ್ತು ಪಂಚಾಯಿತಿಗಳ ವಿಚಾರ ದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು, ಜಿಲ್ಲಾಬೋರ್ಡುಗಳಿರಬೇಕೇ, ತಾಲ್ಲೂಕು ಬೋರ್ಡು ಗಳಿರಬೇಕೇ ಅಥವಾ ಪಂಚಾಯಿತಿಗಳಿರಬೇಕೇ ಎಂಬ ಬಗ್ಗೆ ಒಂದು ಮಸೂದೆಯನ್ನು ಸರ್ಕಾರದವರು ಇದೇ ಅಧಿವೇಶನದಲ್ಲಿಯೇ ತರಬೇಕೆಂದು ಇದ್ದಾರೆ. ಇದುವ ರೆಗೂ ಕಾರಣಾಂತರಗಳಿಂದ ಪೋಸ್ಟ್‌ಪೋನ್ ಮಾಡಿಕೊಂಡು ಬಂದದ್ದುಂಟು. ಸಾಧ್ಯವಾದಷ್ಟು ಬೇಗ ಈ ಸಭೆಯ ಅನುಮತಿಯನ್ನು ಪಡೆದು ಕಾನೂನು ಮಾಡಬೇಕೆಂಬ ತೀವ್ರಾಸಕ್ತಿ ಇದೆ. ಈಗ ನಾವು ಎರಡು ವರ್ಷಕಾಲದವರೆಗೆ ಈ ಜಿಲ್ಲಾಬೋರ್ಡಿನ ಅವ ಧಿಯನ್ನು ಹೆಚ್ಚಿಸಬೇಕೆಂದು ಮಾಡಿದ್ದರೂ, ನಮಗೆ ಹನ್ನೊಂದು ತಿಂಗಳುಮಾತ್ರ ಉಳಿಯುತ್ತವೆ. ಮೇತಿಂಗಳ ಕೊನೆಯೊಳಗೆ ಅಥವ ಜೂಲೈ ತಿಂಗಳ ಪ್ರಾರಂಭದಲ್ಲಿ ಹೊಸ ಕಾನೂನನ್ನು ಜಾರಿಗೆ ತರುವು ದಕ್ಕೆ ಸರ್ವಪ್ರಯತ್ನವನ್ನೂ ಮಾಡಬೇಕೆಂಬುದೇ ನಮ್ಮ ಖಚಿತವಾದ ಉದ್ದೇಶ. ಇದುವರೆಗೂ ನಡೆದಿರು ವಂಥ ಚರ್ಚೆಯನ್ನು ಮಾಡುವುದರಿಂದ ಹೆಚ್ಚಿಗೆ ಪ್ರಯೋಜನವಾಗುವುದಿಲ್ಲವೆಂಬುದನ್ನು ಯೋಚನೆ ಮಾಡಿ ಭಾಷಣಮಾಡಬೇಕೆಂದು ಹೇಳುತ್ತೇನೆ

*ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಮಾನ್ಯ ಸ್ಥಳೀಯ ಸಂಸ್ಥೆಗಳ ಸಚಿವರು ಹೇಳಿದ ವಿಷಯ ಸುಮಾರಾಗಿ ಅರ್ಥವಾಯಿತು. ಆದರೆ ಅವರಿಗೇ ಒಂದು ಅನುಮಾನ ಬಂದಹಾಗೆ ಕಾಣುತ್ತದೆ. ನಾವು ಎಷ್ಟು ದಿವಸ ಇರುತ್ತೇವೆಯೋ, ಏಕೆಮಾಡ ಬೇಕು, ಎಂಬ ಮನೋಭಿಪ್ರಾಯವೇ ಸರ್ಕಾರದವರು ಇನ್ನೂ ತೀರ್ಮಾನಕ್ಕೆ ಬರದಿರಲು ಕಾರಣವಿರಬಹುದು. ಈ ಅವಧಿಯೊಳಗಾಗಿ ನಾವು ಹೋಗಿ ಬೇರೆಯವರು ಬಂದರೆ ಹೇಗೆ ಎನ್ನುವ ಸಂಕುಚಿತ ಭಾವನೆ ....

ಶ್ರೀ ಆರ್. ಚೆನ್ನಿಗರಾಮಯ್ಯ.—ಅವರು ಅಪರೂಪ ವಾಗಿ ಬಂದಿದ್ದಾರೆ. ನಾವು ಬಹಳ ಹಿಂದಿನ ಕಾಲ ದಿಂದಲೂ ಇದ್ದೇವೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ತು ಇಲಾಖೆಯ ಮಂತ್ರಿಗಳು).—ಕಾಂಗ್ರೆಸ್ ಸರ್ಕಾರವೇ ಇರುತ್ತದೆ.

Sri C. J. MUCKANNAPPA.—I rise to to a point of order, Sir. Is it correct on the part of the Hon'ble Minister to remark "ಅವರು ಅಪರೂಪವಾಗಿ ಬಂದಿದ್ದಾರೆ". It is an insult to the member.

Mr. CHAIRMAN.—it is not a point of order. When the Hon'ble Member makes a remark that the Hon'ble Minister wants to stick to his seat for ever, just as a retort to the Hon'ble Member the Minister said that he was a casual member.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಾವು ಹೊಸದಾಗಿ ಬಂದಿರುವವರು. ಅವರು ಶಾಶ್ವತವಾಗಿ ಇರಲಿ. ಆದರೆ ಇಂಥ ಕಾನೂನು ಕಟ್ಟಳೆಮಾಡಿ ಶಾಶ್ವತವಾಗಿ ಅವರ ಹೆಸರನ್ನು ಉಳಿಸಿಕೊಳ್ಳಲಿ ಎಂದು ಹೇಳು ತ್ತೇನೆ.

ಇಂಥ ಕಾನೂನುಗಳನ್ನು ಮಾಡಿ ಜಗತ್ತಿನಲ್ಲಿ ಕೆಟ್ಟ ಹೆಸರು ಬಂತು ಎಂದು ಹೇಳಿಕೊಳ್ಳುವುದರ ಬದಲು ಅಧಿಕಾರದಲ್ಲಿರುವಾಗ ಸ್ವಲ್ಪವಾದರೂ ಜನೋಪಕಾರಿ ಯಾದ ಕೆಲಸಗಳನ್ನು ಮಾಡಿ ಒಳ್ಳೆಯ ಹೆಸರನ್ನು ತೆಗೆದು ಕೊಳ್ಳಲಿ. ಶ್ರೀಮಾ ಚೆನ್ನಿಗರಾಮಯ್ಯನವರ ಮತ್ತು ಶ್ರೀಮಾ ವೀರಣ್ಣಗೌಡರ ಹೆಸರು ಶಾಶ್ವತ ವಾಗಿ ಇರಲಿ ಇವರ ಫೋಟೋಗಳನ್ನು ಹಾಕಿಸಿಕೊಳ್ಳಲಿ ಎನ್ನುವುದೇ ನನ್ನ ಅಭಿಪ್ರಾಯ

Mr. CHAIRMAN.—The Hon'ble Member need not refer to personalities.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮ್ಮ ಮೈಸೂರು ದೇಶದ, ಮಾದರಿ ಮೈಸೂರು ದೇಶದ ಮಂತ್ರಿಗಳ ಭಾವಚಿತ್ರಗಳನ್ನು ದೊಡ್ಡದಾಗಿ ಅನಾವರಣಮಾಡಲು ಅವರ ಹೆಸರು ಶಾಶ್ವತವಾಗಿ ಉಳಿಯಲು ಎಂದು ಹೇಳು ತ್ತಿದ್ದೇನೆ. ಕೇವಲ ಕೆಲವುದಿವಸಗಳ ಹಿಂದೆ ಚುನಾಯಿ ತರಾಗಿದ್ದೇವೆ, ಮುಂದೆ ಬರುತ್ತೇವೆಯೋ ಇಲ್ಲವೋ ಗೊತ್ತಿಲ್ಲ ಎನ್ನುವ ಅನುಮಾನ ಅವರಿಗೆ ಬಂದಿದೆ. ದೀರ್ಘಕಾಲ, ಜೀವಾವಧಿ ತಮ್ಮ ಪದವಿಗಳಿಗೆ ಅಂಟಿ ಕೊಂಡಿರಬೇಕು ಎನ್ನುವ ಉದ್ದೇಶವಿದೆ. ಹಿಂದೆ ಬೇಜವಾಬ್ದಾರಿ ಸರ್ಕಾರ ವಿದ್ದಾಗ ತಮ್ಮ ಭಾಷಣಗ ಳನ್ನು ಕೇಳಿದ್ದೇವೆ, ತಮ್ಮ ಕಾರುಗಳನ್ನು ನೂಕಿದ್ದೇವೆ, ತಮ್ಮನ್ನು ಊರಹೊರಗಿನವರೆಗೆ ಮೆರವಣಿಗೆಯಲ್ಲಿ ಕರೆದುಕೊಂಡುಹೋಗಿ ಬಿಟ್ಟಿದ್ದೇವೆ. ರೈತನೇ ದೇಶದ ಬೆನ್ನುಮೂಳೆ, ಇಂಥ ರೈತನ ದೇಹದಲ್ಲಿ ರಕ್ತವಿಲ್ಲ, ಅವನನ್ನು ನೋಡುವುದಕ್ಕಾಗುವುದಿಲ್ಲ ವೆಂದು ಎಲ್ಲರೂ ಹೇಳುತ್ತಿದ್ದರಿ, ಆದರೆ ಇಪ್ಪತ್ತೈದು ದಿವಸ ಪರಿಸ್ಥಿತಿ ಏನಾಗಿದೆ ಎಂದರೆ.....

Sri H. K. VEERANNA GOWDH.—How is it relevant to the point, Sir ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ,—ಯಾರೋ ಒಬ್ಬ ರನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರಿಗೆ ನಾಮಿ ನೇಷನ್ ಕೊಡಬೇಕುಎಂದು ಸರ್ಕಾರ ಈ ರೀತಿ ಮಸೂದೆಗಳನ್ನು ತರುತ್ತಿದೆ.

Mr. CHAIRMAN.—There is no principle of nomination in this Bill.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಾಮಿನೇಷನ್ ವಿಚಾರ ಈ ಬಿಲ್ಲಿನಲಿಲ್ಲ. ಜಿಲ್ಲಾ ಬೋರ್ಡ್‌ಗಳ ಅವಧಿಯನ್ನು ಹೆಚ್ಚಿಸಿ ತಮ್ಮಲ್ಲಿಸೋತವರಿಗೆ ಅವಕಾಶ ವನ್ನು ಕೊಡುವುದಕ್ಕೆ ಈ ಬಿಲ್ಲನ್ನು ತಂದಿದ್ದಾರೆಂದು ಹೇಳುತ್ತೇನೆ. ಮೊನ್ನೆದಿನ ನಮ್ಮ ಜಿಲ್ಲೆಯಲ್ಲ ಜಿ. ಮರಿಯಪ್ಪನೆಂಬ ಒಬ್ಬನಿಗೆ ಜಿಲ್ಲಾ ಬೋರ್ಡಿನಿಂದ ಅಜೆಂಡವಗೈರೆ ಒಂದು ಒಂದು ಮೀಟಿಂಗಿಗೆ ಹೋಗಿದ್ದ. ಇನ್ನೊಂದು ನಲ ಮತ್ತೊಬ್ಬನು ಹೋದ ...

Mr. CHAIRMAN.—For the information of the Hon'ble Member, I may say that this Bill refers to the district Local Boards in South Kanara which is an elected and democratic body and this was the election which took place about four years ago when the present set up was not there. Therefore, the question of nomination or the substitution of one Mariappa for another Mariappa will not be relevant.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದು ಸರಿ, ಸ್ವಾಮಿ, ಇವರು ಎಷ್ಟು ದಿವಸ ಈ ರೀತಿಯಾಗಿ ಜಿಲ್ಲಾ ಬೋರ್ಡ್‌ಗಳ ಅವಧಿಯನ್ನು ಹೆಚ್ಚಿಸಿಕೊಂಡು ಹೋಗುತ್ತಾರೆ, ಎಷ್ಟು ದಿವಸ ಶಾಶ್ವತವಾಗಿರುತ್ತಾರೆ? ಇವೊತ್ತು ಹೋಗುತ್ತೇವೆಯೋ, ನಾಳೆ ಹೋಗುತ್ತೇವೆಯೋ ಗೊತ್ತಿಲ್ಲ, ನಮ್ಮ ಜೀವವಾನ ಶಾಶ್ವತವಲ್ಲವೆನ್ನುವ ದೃಷ್ಟಿಯಿಂದ ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡಬೇಕಂದಿದ್ದೇನೆ. ಕೆಲವು ಜಿಲ್ಲಾ ಬೋರ್ಡ್‌ಗಳಲ್ಲಿ ಅನೇಕ ಶಾಲಾಧ್ಯಾಪಕರಿಗೆ ಸಂಬಳವನ್ನು ಕೊಟ್ಟಿಲ್ಲ; ಐದಾರುವರ್ಷಗಳಲ್ಲ ಕಟ್ಟಿರುವ ಜಿಲ್ಲಾ ಬೋರ್ಡ್ ಶಾಲಾ ಕಟ್ಟಡಗಳು ಇವೊತ್ತು ಹಾಳಾಗುತ್ತಿವೆ. ಇದಕ್ಕೆಲ್ಲ ಜವಾಬ್ದಾರರು ಯಾರು? ಮಳೆಯನೂರು ನ್ಯೂಲು ಕಟ್ಟಡವನ್ನು ಕಟ್ಟಿ ನಾಲ್ಕು ವರ್ಷ ಮಾತ್ರವಾಗಿದೆ .....

ಶ್ರೀ ಎಚ್. ಕೆ ವೀರಣ್ಣಗೌಡ.—ಮಾನ್ಯ ಸದಸ್ಯರು ಬಿಲ್ಲಿಗೆ ಸಂಬಂಧಪಡದ ಯಾವುದೋ ವಿಷಯಗಳನ್ನು ಹೇಳುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.— ಮೊದಲು ವೆಂಕಟಪ್ಪ ಸಮಿತಿ ಎಂದು ಮಾಡಿದರು. ಆಮೇಲೆ ಮತ್ತು ಕೆಲವು ಸಮಿತಿಗಳನ್ನು ಮಾಡಿದರು. ಇವರ ಪಕ್ಷದವರಿಗೆ ಒಂದು ಅವಕಾಶ ಕಲ್ಪಿಸಲು ಯಾವುದಾದರೂ ಒಂದು ಸಮಿತಿಯನ್ನು ನೇಮಕಮಾಡಿ ನಿಮ್ಮ ಶಿಫಾರ್ಸುಗಳನ್ನು ಮಾಡಿ ಎಂದು ಅವರಿಗೆ 3-4 ತಿಂಗಳು ಕೆಲಸ ಕೊಡುತ್ತಾರೆ. ಅವರು ಶಿಫಾರಸು ಮಾಡಿದುದನ್ನು ಕಾನೂನಿನಲ್ಲೆ ತರುತ್ತಾರೆ. ವೆಂಕಟಪ್ಪ ಕಮಿಟಿ, ತಿಮ್ಮಪ್ಪ ಕಮಿಟಿ, ಹನುಮಪ್ಪ ಕಮಿಟಿ ಹೀಗೆ ಎಷ್ಟೋ ಕಮಿಟಿಗಳಾದುವು. ತಮ್ಮ ಪಕ್ಷದವರಿಗೆ ಯಾವುದೋ ಒಂದು ಉದ್ಯಮವನ್ನು ಕೊಡಬೇಕು, ಅವರನ್ನು ಕಾಪಾಡಬೇಕು ಎನ್ನುವ ಉದ್ದೇಶದಿಂದ ಇಂಥ ಸಮಿತಿಗಳನ್ನು ನೇಮಕಮಾಡುತ್ತಿದ್ದಾರೆ. ಇಂಥ ಕೆಲಸಗಳಿಂದ ಜನಗಳಿಗೆ ಉಪಯೋಗವಾಗಿಲ್ಲ. ಜಿಲ್ಲಾ ಬೋರ್ಡುಗಳ ಅವಧಿಯನ್ನು ಮುಂದಕ್ಕೆ ಹಾಕಿಕೊಂಡು ಹೋಗಬೇಡಿ ಎಂದು ಸಲಹೆ ಮಾಡುತ್ತ ಈಗ ತಂದಿರುವ ಮಸೂದೆಯನ್ನು ವಾಪಸು ತೆಗೆದುಕೊಂಡು ಶೀಘ್ರದಲ್ಲಿಯೇ ಒಟ್ಟು ರಾಜ್ಯಕ್ಕೆಲ್ಲ ಅನ್ವಯಿಸುವಂತೆ ಜಿಲ್ಲಾಬೋರ್ಡ್ ಮಸೂದೆಯನ್ನು ತರುವ ತೀರ್ಮಾನವನ್ನು ತೆಗೆದುಕೊಂಡು ಈ ಅಧಿವೇಶನದಲ್ಲಿಯೇ ಅಂಥ ಒಂದು ಮಸೂದೆಯನ್ನು ತರುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

Sri M. C. NARASIMHAN (Kolar Gold Fields).—Sir, first I endorse the opinion expressed by the Hon'ble Member Sri Venkatai Gowda in respect of the propriety of not placing the ordinance for our approval but bringing in addition an amendment to Section 11 of the Madras District Boards Act. If the ordinance alone had been placed before the House for our approval and for being replaced by an Act of this legislature, these District Boards would have continued till the end of October as stated in the ordinance. The Hon'ble Minister was pleased to say that it may not be possible to enact the new law by October. That is the argument that he advanced. It is not so simple as he says. It passes my comprehension why the Bill seeks to extend the term by two years.

If it had been so simple as made out by the Minister it would have been sufficient. After all, he has promised that during this session a Bill with reference to this matter would come up for consideration. I am very doubtful of that for this reason. We had in the Order Paper the Mysore Village Panchayats and District Boards Bill or something like that, but subsequently it disappeared from the Order Paper. I also ascertained that it was not likely to come up in the near future at this very session. So under these circumstances I am thankful that there is an assurance that before the budget session is over, there will be a Bill. I hope they will try to implement it.

There is another aspect. It is not as if I am anxious to make criticism just because Government comes forward with power to extend the life of the District Board. It is now South Kanara; last time it was Bombay; formerly it was Mysore. So far as my own constituency is concerned, that is, Kolar Gold Fields it is again in the same fate. You will see that there is a concerted move in favour of the continuance of unelected or even elected body whose office was due to expire on a particular date. This policy, viewed in this light, is really a matter for grave consideration; it throws a doubt as to whether the Government is serious about introducing a democratic policy. It is only in that light that we are making these submissions, not at all from the point of view that because we belong to the Opposition we want to make criticism, as remarked by Sri H. C. Linga Reddy. It is true that one argument is advanced by him is that the District Boards do not have sufficient funds and so they cannot conduct elections and all that is correct. That alone is not the issue. The issue is as to whether the Government can give us an assurance that at least before the end of this year they will introduce some reform in relation to the local boards. My own feeling is that there

(SRI M. C. NARASIMHAN)

will be no such thing. It is because the Congress Party in the Legislature is in utter confusion in respect of this matter. It is not as if thinking was wanting in respect of this matter, because the A.I.C.C. as far as I know, thought over the question. Conferences go on repeating *ad nauseum* that there is need for proper administration at the level of village panchayats and local boards. But why is it that the Government of Mysore is unable to come to a definite conclusion? The Venkatappa Committee was mentioned; there was the Chandrasekhariah Committee. All this is past history or it is not that there is adequate material. It is only a question of the Cabinet boldly determining a particular policy. It is not as if there is going to be so much of confusion, chaos and all that if a particular Bill is introduced. This particular extension is going to create more discontent than any of the Bills. If tomorrow they bring in another Bill, it will be considered as something much better than nothing. Instead of there being a void, there will be somebody at least responsible to the people. It is only because of this aspect that I am making this submission that this Bill is really not in order.

ಶ್ರೀ ಎ. ಶ್ರೀನಿವಾಸಶೆಟ್ಟಿ (ಕುಂದಾಪುರ).— ಸ್ವಾಮಿ, ಈ ಮಸೂದೆಯ ವಿಚಾರವಾಗಿ ಎರಡು ಮಾತುಗಳನ್ನು ನಾನು ಹೇಳಬೇಕಾಗಿದೆ. ಏಕೆಂದರೆ, ನನಗಿಂತ ಮುಂಚೆ ಮಾತನಾಡಿದ ಮಿತ್ರರು ನಮ್ಮ ಜಿಲ್ಲೆಯವರಲ್ಲ. ಈ ವಿಷಯ ನನಗೆ ಸ್ವಲ್ಪ ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಇದೆಯೋ ಇಲ್ಲವೋ ಎಂಬ ಪ್ರಶ್ನೆ ಇಲ್ಲಲ್ಲ. ಕಾಯಿದೆಯ ವಿಚಾರ ಮಾತನಾಡಿದರೆ, ಮದರಾಸು ಕಾಯಿದೆಯ 11 (1-A) ಸೆಕ್ಷನ್‌ನಲ್ಲಿ. "The State Government may, by notification, for sufficient cause which shall be stated therein, direct that the term of office of the members of any District Board as a whole be extended or reduced by such period not exceeding three months as may be specified in the notification" ಎಂದಿದೆ. ಇದರ ಪ್ರಕಾರ ಸದಸ್ಯರ ಅವಧಿಯನ್ನು ಮೂರು ತಿಂಗಳು ಕಡಮೆ ಅಥವ ಹೆಚ್ಚು ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಇಷ್ಟೇ ಸಾಕು, ಹೆಚ್ಚು ಬೇಡ ಎಂಬ ಉದ್ದೇಶದಿಂದ ಅವರು ಮಾಡಿದರು. ಆದರೆ ಮೈಸೂರು ಸರ್ಕಾರ ತಿದ್ದುಪಡಿಯಲ್ಲಿ "or reduced" ಎಂಬುದನ್ನು ಬಿಟ್ಟು ಬಿಟ್ಟಿದೆ. ಖಂಡಿತವಾಗಿ ಇದೇ ಅಧಿವೇಶನದಲ್ಲಿ ಒಂದು ಮಸೂದೆಯನ್ನು ತರುವ ಉದ್ದೇಶವಿದ್ದಿದ್ದರೆ ಈ ಒಂದು ಶಬ್ದವನ್ನು ಏಕೆ ತೆಗೆದು ಹಾಕಿದರೋ ಗೊತ್ತಿಲ್ಲ. ಅಲ್ಲದೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಬೋರ್ಡನ್ನು ಮೊದಲು ಮೂರು ತಿಂಗಳು ಮುಂದುವರಿಸಿದರು, ಆ ಮೇಲೆ ಎರಡನೆಯ ಸಾರಿ ಒಂಭತ್ತು ತಿಂಗಳು ಮುಂದುವರಿಸಿದರು. ಒಟ್ಟು ಒಂದು ವರ್ಷವಾಯಿತು. ಒಂದು ವರ್ಷ ಸಾಕೆಂದು ಒಂದು ಆರ್ಡಿನೆನ್ಸ್ ಮಾಡಿದರು. ಈಗ ಎರಡು ವರ್ಷ ಎಂದಾಗಿದೆ. ಹೀಗಾದರೆ ನಮ್ಮ ಸರ್ಕಾರಕ್ಕೆ ಒಂದೇ ಬುದ್ಧಿ, ಒಂದೇ ನಿಶ್ಚಿತ ಮನಸ್ಸು ಇದೆಯೇ ಎಂದು ಕೇಳಬೇಕಾಗಿದೆ. ಈಗ ಜಿಲ್ಲಾ ಬೋರ್ಡು ಬೇಕೋ ಅಥವಾ ಬೇಡವೋ ಎಂಬ ಪ್ರಶ್ನೆ ಇದೆ ಎಂದು ಕೆಲವರು ಮಿತ್ರರು ಹೇಳಿದರು. ಅಖಿಲಭಾರತ ಸೆಮಿನಾರ್ ನಡೆಯಿತು. ಬಲವಂತ ರಾವ್ ಸಮಿತಿಯ ಸಲಹೆಯ ಪ್ರಕಾರ ಇಂಡಿಯಾ ಸರ್ಕಾರ ಒಂದು ನಿರ್ಣಯ ಮಾಡಿತು, ಅದರ ಪ್ರಕಾರ ಜಿಲ್ಲಾ ಬೋರ್ಡುಗಳು ಹೋಗಬೇಕು. ತಾಲ್ಲೂಕು ಬೋರ್ಡ್ ವಿಚಾರ ಗೊತ್ತಿಲ್ಲ; ಬ್ಲಾಕ್ ಪಂಚಾಯಿತಿ ಎಂದು ಮಾಡಬೇಕೆಂದಾಯಿತು. ಕಮ್ಯುನಿಟಿ ಪ್ರಾಜೆಕ್ಟ್ ಪ್ರದೇಶದಿಂದ ಚುನಾವಣೆ ಮಾಡಿ ಬ್ಲಾಕ್ ಪಂಚಾಯಿತಿ ಮಾಡಬೇಕೆಂದು ಸಲಹೆ ಮಾಡಿದರು. ಮದರಾಸ್ ಸರ್ಕಾರದವರು ಕೇಂದ್ರ ಸರ್ಕಾರದ ಅಭಿಪ್ರಾಯದಂತೆ ಜಿಲ್ಲಾ ಬೋರ್ಡುಗಳು ಹೋಗಬೇಕೆಂದು ಮಾಡಿಕೊಂಡಿದ್ದಾರೆ. ನಮ್ಮ ಮೈಸೂರು ಸರ್ಕಾರವಾದರೋ ಜಿಲ್ಲಾ ಬೋರ್ಡ್ ಹೋಗುತ್ತದೆಯೋ ಬರುತ್ತದೆಯೋ, ತಾಲ್ಲೂಕ್ ಬೋರ್ಡ್ ಬರುತ್ತದೆಯೋ ಎಂಬ ಯಾವುದನ್ನೂ ಖಚಿತವಾಗಿ ಹೇಳುತ್ತಿಲ್ಲ. ನಮ್ಮ ಕಡೆ ಕೆಸರು ಗೂಟ ಎಂದು ಹೇಳುತ್ತಾರೆ; ಯಾವ ಕಡೆ ಎಳೆದರೂ ಆ ಕಡೆ ಹೋಗುತ್ತದೆ. ಆ ಸ್ಥಿತಿಯಲ್ಲಿ ನಮ್ಮ ಸರ್ಕಾರ ಇದೆ. ಜಿಲ್ಲಾ ಬೋರ್ಡ್, ತಾಲ್ಲೂಕು ಬೋರ್ಡ್, ಪಂಚಾಯಿತಿ ಬೋರ್ಡೇ ಆಗುತ್ತದೆಯೆ ಎಂಬ ಬಗ್ಗೆ ನಿರ್ಣಯವಾಗಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ವಿಷಯದಲ್ಲಿ ಮೂರು ರೀತಿ ಆಯಿತು. ಈ ಅಧಿವೇಶನದಲ್ಲೇ ಈ ಸಂಬಂಧವಾದ ಬಿಲ್ಲು ಬರುತ್ತದೆಂದು ಈ ಅಧಿವೇಶನಕ್ಕೆ ಬರುವುದಕ್ಕೆ ಮುಂಚೆ ಕೇಳಿದ್ದೆ. ನನ್ನ ಮಿತ್ರರು ಹೇಳಿದ ಹಾಗೆ ಮೊದಲು ಕಾರ್ಯಕ್ರಮದ ಪಟ್ಟಿಯಲ್ಲಿ ಈ ಮಸೂದೆ ಚರ್ಚೆಗೆ ಬರುತ್ತದೆಂದಿತ್ತು. ಆದರೆ ಈಗ ಅದು ಕಾಣುವುದಿಲ್ಲ; ಬರುವುದರಲ್ಲಿದೆ ಎಂದು ಮಂತ್ರಿಗಳು ಹೇಳುತ್ತಾರೆ. ಯಾವುದೇ ನಿರ್ಣಯ ಅಥವಾ ನಿಶ್ಚಿತವಿಲ್ಲ, ಯಾವಾಗ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬೋರ್ಡಿನ ವಿಚಾರ ಹೇಳುವುದಾದರೆ, ಅಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹುಮತವಿದೆ. ಅಲ್ಲಿನ ಸದಸ್ಯರು ಚುನಾವಣೆಯ ಮೂಲಕ ಆರಿಸಿ ಬಂದಿದ್ದಾರೆ. ಅದರ ವಿಚಾರದಲ್ಲಿ ಮೈಸೂರಿನವರು ಯಾರೂ ಅಳಿಯುವಹಾಗಿಲ್ಲ. ಇಂಥ ಹೊಲಸು ವಾತಾವರಣ ಅಲ್ಲಿ ಬಂದಿಲ್ಲ. ಆದರೆ ಈ ಹೊತ್ತಿನ ವಾತಾವರಣವನ್ನು ನೋಡಿದರೆ, ಅದೂ ಇಲ್ಲಿಯ ದಾರಿಗೇ ಬರುತ್ತದೆಯೋ ಏನೋ ಎನಿಸುತ್ತದೆ. ಏಕೆಂದರೆ, ಮೂರು ತಿಂಗಳು, ಒಂಭತ್ತು ತಿಂಗಳು, ಒಂದು ವರ್ಷ, ಎರಡು ವರ್ಷ, ಹೀಗೆ ಬದಲಾಯಿತು. ತಾವು ಯಾವ ರೀತಿ ಹೋಗುತ್ತಾರೆಂಬುದನ್ನು ಮಂತ್ರಿಗಳು ನಿರ್ಣಯ ಸುವುದಿಲ್ಲ. ಆದಕಾರಣ ಈ ರಾಜ್ಯಕ್ಕೆ ನಾವೂ ಸೇರಿದ್ದೇವೆ. ಇಲ್ಲಿನ ಜಿಲ್ಲಾ ಬೋರ್ಡಿನ ಪರಿಸ್ಥಿತಿ ಅಲ್ಲಿಯೂ ಬರುತ್ತದೆಯೋ ಏನೋ ಎಂಬ ಭಯ ನಮಗೆ ಬರುತ್ತದೆ. ಬೇಕಾದರೆ ಜಿಲ್ಲಾ ಬೋರ್ಡುಗಳನ್ನೇ ಮಾಡಲಿ, ಬೇಡದಿದ್ದರೆ ತೆಗೆದುಹಾಕಲಿ. ಆದರೆ

ಪಂಚಾಯತಿ ಬೋರ್ಡ್ ಬರುತ್ತದೆಯೋ, ಯಾವುದು ಬರುತ್ತದೆಯೋ ಗೊತ್ತಿಲ್ಲ. ಈಗಾಗಲೇ ಅನೇಕ ಪಂಚಾಯಿತಿಗಳಲ್ಲಿ ಚುನಾವಣೆಗಳು ಆಗುತ್ತಿವೆ. ಬರುವ ಅಧಿವೇಶನದಲ್ಲಿ ಮಸೂದೆ ತರಬೇಕೆಂಬ ಉದ್ದೇಶವಿದ್ದಿದ್ದರೆ, ಪಂಚಾಯತಿ ಚುನಾವಣೆಗಳಾಗ ಬೇಕೆಂದು ಏಕೆ ಸೂಚನೆ ಕೊಟ್ಟರು? ಚುನಾವಣೆ ಗಳನ್ನು ಎರಡು ವರುಷ ಮುಂದುವರಿಸಬೇಕೆಂದು ಈ ಮಸೂದೆಯಲ್ಲಿ ತಂದಿದೆ. ಅಲ್ಲದೆ ಚುನಾವಣೆಗಳೂ ಸಹ ಬೇಗನೆ ಆಗಬೇಕಾಗಿದೆ ಎಂದೂ ಹೇಳುತ್ತೀರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಂಚಾಯತಿಗಳ ಚುನಾವಣೆ ಗಳು ಈಗ ಆಗುತ್ತಿವೆ. ಚುನಾವಣೆಗಳನ್ನು ಒಂದು ತಿಂಗಳೋ ಅಥವಾ ಹದಿನೈದು ದಿವಸವೋ ಮುಂದೆ ಹಾಕಿದ್ದರೆ ನಂಬಬಹುದಾಗಿತ್ತು. ಆದರೆ ಎರಡು ವರ್ಷ ಚುನಾವಣೆಗಳನ್ನು ಮುಂದುವರಿಸುವುದು ಏತಕ್ಕಾಗಿ ಎಂಬುದು ಅರ್ಥವಾಗಲಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಇದೇ ಅಧಿವೇಶನ ದಲ್ಲಿ ಮಸೂದೆಯನ್ನು ಸಭೆಯಲ್ಲಿ ಮಂಡಿಸಲಾಗುವುದು ಅದಕ್ಕೆ ಅನುಮಾನ ಪಡಬೇಕಾಗಿಲ್ಲ ಬಿಲ್ ಪಾಸ್ ಮಾಡಿಸಿಕೊಂಡು ಒಂದೇ ವರ್ಷದ ಅವಧಿಯಲ್ಲಿ ಜಾರಿಗೆ ಸಹ ತರುವದಕ್ಕಾಗುವದಿಲ್ಲ. ಮೊದಲು ಡ್ರಾಫ್ಟ್ ಬಿಲ್ಲು ತಯಾರಾಗಬೇಕು. ಇದೇ ಅಧಿವೇಶನದಲ್ಲಿ ಮಸೂದೆಯು ಕಾನೂನಾಗಿ ಪಾಸ್ ಆದರೂ ಸಹ ಮುಂದೆ ಜಾರಿಗೆ ತರಲು ಅನೇಕ ಹಂತಗಳಿವೆ. ಚುನಾವಣೆಗಳು ಆಗಬೇಕು. ಇದಕ್ಕೆಲ್ಲಾ ಒಂದು ವರ್ಷಕ್ಕಿಂತ ಹೆಚ್ಚು ಅವಧಿ ಹಿಡಿಯುತ್ತದೆ. ಆದಕಾರಣ ಎರಡು ವರ್ಷ ಅವಧಿಯನ್ನು ಕೇಳಲಾಗಿದೆ.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಕೆಲವೇ ತಿಂಗಳಿನಲ್ಲಿ ಕಾನೂನು ತಯಾರಾಗುವುದಿದ್ದರೆ ಚುನಾವಣೆಗಳನ್ನು ಬೇಗನೆ ಏತಕ್ಕೆ ನಡೆಸಬಾರದು ಎಂದು ನಾನು ಕೇಳುತ್ತೇನೆ. ಒಂದು ವರ್ಷದೊಳಗಾಗಿ ಚುನಾವಣೆ ಗಳು ಆಗುವುದು ಹೇಗೆ ಸಾಧ್ಯವಿಲ್ಲವೆಂಬುದು ನನಗೆ ತಿಳಿಯುವದಿಲ್ಲ. ಆರು ತಿಂಗಳು ಅಥವಾ ಒಂದು ವರ್ಷ ಅವಧಿ ಸಾಕಾಗಬಹುದು ಎಂದು ನನಗೆ ಅನಿಸುತ್ತದೆ. ಚುನಾವಣೆಗಳು ನಡೆದು ಜಿಲ್ಲಾ ಬೋರ್ಡು ಗಳು ಸರಿಯಾಗಿ ಕೆಲಸ ಮಾಡಬೇಕಾದುದು ಅಗತ್ಯ. ಆದರೆ ಪ್ರತಿಯೊಂದು ಜಿಲ್ಲಾ ಬೋರ್ಡಿಗೆ ಸಲ್ಫೈನ್ ಇಂಜೆಕ್ಷನ್ ಕೊಟ್ಟು ಮುಂದುವರಿಸುತ್ತಿದ್ದಾರೆ. ಸರಕಾರ ದುಡ್ಡು ಕೊಟ್ಟರೆ ಜಿಲ್ಲಾ ಬೋರ್ಡುಗಳು ನಡೆಯುತ್ತವೆ. ತಮ್ಮಷ್ಟಕ್ಕೆ ತಾವೇ ಸ್ವತಂತ್ರವಾಗಿ, ನಡೆಯುವುದಕ್ಕೆ ಅವುಗಳಿಗೆ ಸಾಧ್ಯವಿಲ್ಲ. ಸಲ್ಫೈನ್ ಇಂಜೆಕ್ಷನ್ ಕೊಟ್ಟು ಜೀವದಾನ ಕೊಡುತ್ತಿದ್ದೀರಿ. ಇಂಥ ಪರಿಸ್ಥಿತಿಯಲ್ಲಿ ಜಿಲ್ಲಾ ಬೋರ್ಡುಗಳು ಈ ರೀತಿ ಯಾಗಿ ಇರುವುದು ಅಗತ್ಯವೋ ಅನಗತ್ಯವೋ ಎಂಬ ಒಂದು ಪ್ರಶ್ನೆ ಉದ್ಭವಿಸುತ್ತದೆ. ಆದುದರಿಂದ ಅದಷ್ಟು ಬೇಗನೆ ಚುನಾವಣೆಗಳು ಆಗುವಂತೆ ಮಾಡ ಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸು ತ್ತೇನೆ.

*ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಮಾನ್ಯ ಸಭಾಧ್ಯಕ್ಷರೇ, ಈಗ ಸಭೆಯು ಮುಂದೆ ಚರ್ಚೆಗೆ ಬಂದಿ ರುವ ಮಸೂದೆಯ ಮೇಲೆ ವಿರೋಧ ಪಕ್ಷದ ಸದಸ್ಯರು ಮಾಡಿದ ಭಾಷಣಗಳನ್ನು ಕೇಳಿ, ಅದರಲ್ಲಿಯೂ ಕೊನೆಯದಾಗಿ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀನಿವಾಸಶೆಟ್ಟಿಯವರ ಭಾಷಣ ಕೇಳಿದ ನಂತರ ನನಗೆ ಎನ್ನಿಸುವದೇನೆಂದರೆ ಈ ಜಿಲ್ಲಾ ಬೋರ್ಡುಗಳು ಇರಬೇಕಾದ ಅಗತ್ಯ ಇದೆಯೇ ಇಲ್ಲವೇ ಎಂಬ ವಿಚಾರವಾಗಿ ಅವರು ಸಂಶಯ ವ್ಯಕ್ತಪಡಿಸಿ ದ್ದಾರೆ. ನಮ್ಮ ಮೈಸೂರು ದೇಶದ ನೆರೆಯ ಪ್ರಾಂತ ಗಳಾದ ಮದ್ರಾಸ್, ಆಂಧ್ರ ಪ್ರದೇಶಗಳಲ್ಲಿ ಕೂಡ ಈ ಜಿಲ್ಲಾ ಬೋರ್ಡುಗಳ ಅವಶ್ಯಕತೆ ಅಷ್ಟಾಗಿ ಇಲ್ಲ. ಈಗ ಬದಲಿಸಿದ ವಾತಾವರಣದಲ್ಲಿ ದೇಶದ ಅಭಿವೃದ್ಧಿ ಕಾರ್ಯಗಳನ್ನು ನಡೆಸುವದಕ್ಕೆ ಸಂಸ್ಥೆಗಳನ್ನು ಕಟ್ಟ ಬೇಕಾದ ಆವಶ್ಯಕತೆಯಿದೆ ಎಂಬುದಾಗಿ ಎಲ್ಲರೂ ಅಭಿ ಪ್ರಾಯ ವ್ಯಕ್ತಪಡಿಸಿರುವ ವಿಚಾರ ಮಾನ್ಯ ಸದಸ್ಯರೆಲ್ಲ ರಿಗೂ ಗೊತ್ತಿದೆ. ಉಪಯುಕ್ತವಾದ ಕೆಲಸಗಳನ್ನು ನಿರ್ವಹಿಸಿಕೊಂಡು ಕಾರ್ಯಮಾಡಲು ಜಿಲ್ಲಾ ಬೋರ್ಡುಗಳ ಅವಶ್ಯಕತೆಯಿದೆ. ಅದಕ್ಕೋಸ್ಕರ ಒಂದು ಕಾನೂನು ರಚಿಸಬೇಕಾಗಿದೆ. ಈಗ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಬೋರ್ಡಿನ ಅವಧಿಯನ್ನು ವಿಸ್ತರಿಸಬೇಕಾಗಿದೆ. ಅವಶ್ಯವಿದ್ದಷ್ಟು ಕಾಲ ಹಾಗೆ ವಿಸ್ತರಿಸಲೇಬೇಕಾಗುತ್ತದೆ. ಈ ಜಿಲ್ಲಾ ಬೋರ್ಡಿನ ಅವಧಿಯನ್ನು ಮೊದಲು ಮೂರು ತಿಂಗಳು, ಅನಂತರ ಒಂಭತ್ತು ತಿಂಗಳು, ಪುನಃ ಒಂದು ವರ್ಷ ಹೀಗೆ ಸರ ಕಾರ ಅವಧಿಯನ್ನು ಹೆಚ್ಚುಮಾಡುತ್ತಾ ಬಂದಿದ್ದಾ ರೆಂದು ಶ್ರೀಮಾನ್ ಶ್ರೀನಿವಾಸಶೆಟ್ಟಿಯವರು ಹೇಳಿ ದರು ಈಗ ತಂದಿರತಕ್ಕಂಥ ಮಸೂದೆಯಲ್ಲಿ ಈ ಅವ ಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸುವದಾಗಿದೆ ಎಂದೂ ಅವರು ಹೇಳಿದರು. ಆದರೆ ಕಾನೂನನ್ನು ಪರಿಶೀಲನೆ ಮಾಡಿ ನೋಡಿದರೆ ಇದಕ್ಕೆ ಇರುವ ಕಾರಣ ಅವರಿಗೆ ಗೊತ್ತಾಗುತ್ತದೆ. ಜಿಲ್ಲಾ ಬೋರ್ಡಿನ ಅವಧಿಯು 27ನೆಯ ಅಕ್ಟೋಬರ್ 1957ಕ್ಕೆ ಮುಗಿಯುತ್ತದೆ. ಮೂರುತಿಂಗಳ ಅವಕಾಶವಿತ್ತು. ಆದರೆ ಡಿಸೆಂಬರ್ ಜನವರಿ ತಿಂಗಳುಗಳಲ್ಲಿ ಅಸೆಂಬ್ಲಿ ಅಧಿವೇಶನ ಸೇರ ಬೇಕಾದದ್ದು ಯಾಕೆ ಸಭೆ ಸೇರಲಲ್ಲ ಎಂಬುದು ಎಲ್ಲ ರಿಗೂ ಗೊತ್ತಿದೆ. ಈ ಸಭೆ ನಡೆಸುವುದಕ್ಕೆ ಅನುಕೂಲ ವಿರಲಿಲ್ಲ. ಈ ಸಭೆಯಲ್ಲಿ Sound equipment ಜೋಡಿಸುವ ಕೆಲಸ ನಡೆದದ್ದು ಎಲ್ಲರಿಗೂ ತಿಳಿದ ವಿಷಯ. ಒಂದು ವೇಳೆ ಈ ಮೊದಲೇ ಅಸೆಂಬ್ಲಿ ಸಭೆ ಸೇರಿದ್ದರೆ ಈ ಮಸೂದೆಯನ್ನು ಈ ಮೊದಲೇ ಮಂಡಿ ಸಲಾಗುತ್ತಿತ್ತು. ಆದಕಾರಣ ಅನಿವಾರ್ಯವಾಗಿ ಈ ಮೂರು ತಿಂಗಳ ಅವಧಿಯಲ್ಲಿ ಆರ್ಡಿನೆನ್ಸ್ ಹೊರಡಿಸ ಬೇಕಾಯಿತು. ಇದರಲ್ಲೂ ಕೂಡ ಒಂದು ವರ್ಷ ಹೆಚ್ಚಿನ ಅವಧಿಯನ್ನು ಕೇಳದೆ ಎರಡು ವರ್ಷ ಅವಧಿ ಯನ್ನು ಯಾಕೆ ಕೇಳಿದ್ದಾರೆ ಎಂದು ಒಂದು ಪ್ರಶ್ನೆ ಯನ್ನು ಹಾಕಬಹುದು. ಇದನ್ನು ವಿಚಾರ ಮಾಡೋಣ. ಒಂದು ವರ್ಷ ಅಷ್ಟೇ ಅವಧಿ ಹೆಚ್ಚಿಸಿ ದ್ದರೆ ಅದು 27ನೆಯ ಅಕ್ಟೋಬರ್ 1958ಕ್ಕೆ ಮುಗಿ ಯುತ್ತಿತ್ತು. ಒಂದುವೇಳೆ ಕಾನೂನು ಪಾಸುಮಾಡಿ ಕೊಂಡಿದ್ದರೂ ಸಹ ಚುನಾವಣೆಗಳನ್ನು 27ನೆಯ ಅಕ್ಟೋಬರ್ 1958ರ ಒಳಗಾಗಿ ನಡೆಸುವುದು ಸಾಧ್ಯ ವಾಗುತ್ತಿರಲಿಲ್ಲ. ಕಾನೂನು ಪಾಸುಮಾಡಲೂ ಸಹ ಈ ಸಭೆಗೆ ಹೆಚ್ಚುಕಾಲ ಬೇಕು. ಕಾನೂನಿಗೆ ಗಮನ ಕೊಡುವದಕ್ಕೆ ಹೆಚ್ಚು ಕಾಲಾವಕಾಶಕೊಡಲು ಈಗ ಈ ಬಡ್ಜೆಟ್ ಅಧಿವೇಶನದಲ್ಲಿ ಆಗುವದಿಲ್ಲ. ಈ ಅಧಿ ವೇಶನದಲ್ಲಿ 1958-59ನೆಯ ವರ್ಷದ ಬಡ್ಜೆಟ್ಟನ್ನು ಈ ಸಭೆಯು ಪರಿಶೀಲನೆಮಾಡಬೇಕಾಗಿದೆ. ಬಡ್ಜೆಟ್ ಕೆಲಸ ಮುಗಿದಮೇಲೆ ಕಾನೂನುಗಳನ್ನು ತೆಗೆದ ಕೊಳ್ಳಬಹುದು. ಆದರೆ ಸಾಕಷ್ಟು ಕಾಲಾವಕಾಶ ಉಳಿಯುವುದಿಲ್ಲ. ಆದುದರಿಂದ ಇಷ್ಟು ಅವಸರ ಅವ ಸರವಾಗಿ ಕರಡು ಮಸೂದೆಯನ್ನು ಸಭೆಯ ಮುಂದೆ ತಂದು ಅದನ್ನು ಒಪ್ಪಿಕೊಂಡು ಕಾನೂನುಮಾಡಿ ಜಾರಿಯಲ್ಲಿ ತರಲು ಸಾಧ್ಯವೇ? ಒಂದುವೇಳೆ ಕರಡು ಮಸೂದೆಯನ್ನು ಒಪ್ಪಿ ಕಾನೂನುಮಾಡಿದರೂ ಕೂಡ ಚುನಾವಣೆ ನಡೆಸಲು ಸಾಧ್ಯವೇ?

(ಶ್ರೀ ಕೆ. ಪುಟ್ಟಸ್ವಾಮಿ)

6 P.M.

ಅಲ್ಲದೆ, ಇದೊಂದು ಬಹು ಮುಖ್ಯವಾದ ಮಸೂದೆ ಯಾಗುತ್ತದೆ. ದೇಶದಲ್ಲಿ ಇಂಥ ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾದರೂ, ಗ್ರಾಮಗಳಲ್ಲಿ ಗ್ರಾಮ ಸ್ವರಾಜ್ಯ ಸ್ಥಾಪನೆಮಾಡಬೇಕಾದರೂ ಅವರು ಸ್ವಯಂ ಆಡಳಿತ ನಡೆಸುವ ವ್ಯವಸ್ಥೆ ಮಾಡಬೇಕಾದರೆ ಬಹಳ ಎಚ್ಚರಿಕೆಯಿಂದ ಮಾಡಬೇಕು. ಈ ಬಗ್ಗೆ ಬಹಳ ಗಮನಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಮಸೂದೆ ಬಂದರೆ ಅದನ್ನು ಮಾಮೂಲಾಗಿ ಚರ್ಚೆ ಮಾಡಬೇಕಾಗುತ್ತದೆ. ಅದು ಸೆಲೆಕ್ಟ್ ಕಮಿಟಿಗೆ ಹೋಗಿ ಅವರ ರಿಪೋರ್ಟ್ ತರಿಸಿಕೊಂಡು ಕಾನೂನು ಮಾಡಬೇಕಾಗುತ್ತದೆ. ಆದ್ದರಿಂದ ನಾವು ಎಷ್ಟೇ ಶ್ರದ್ಧಾಪೂರ್ವಕವಾಗಿ ಪ್ರಯತ್ನ ನಡೆಸಿದರೂ ಈ ಮಸೂದೆ ಕಾನೂನಾಗಬೇಕಾದರೆ ಕನಿಷ್ಠ ಪಕ್ಷ ಆರು ತಿಂಗಳಾದರೂ ಆಗಿಯೇ ಆಗುತ್ತದೆ. ಅಷ್ಟರೊಳಗೆ ಅಕ್ಟೋಬರ್ ತಿಂಗಳು ಬಂದುಬಿಡುತ್ತದೆ. ಈ ಕಾರಣ 27ನೆಯ ಅಕ್ಟೋಬರ್ 1958ರ ಹೊತ್ತಿಗೆ ಕಾನೂನಾಗಿರುವುದಿಲ್ಲ, ಚುನಾವಣೆಗಳಾಗಿರುವುದಿಲ್ಲ. ಚುನಾವಣೆಗಳಾಗಬೇಕಾದರೆ ಆರು ತಿಂಗಳು ಒಂದು ವರ್ಷ ಕಾಲ ಬೇಕು ಎಂದು ಮತ್ತೆ ಮುಂದುವರಿಸುವ ಮಸೂದೆಯನ್ನು ಈ ಸಭೆಯ ಮುಂದೆ ತರಬೇಕಾಗುತ್ತದೆ. ಯಥಾಪ್ರಕಾರ ಈ ಹೊತ್ತು ಏನು ಪಾಡ ಬಂತೋ ಅದು ಬಂದೇಬರುತ್ತದೆ. ಹೀಗಾಗಿ ಜಿಲ್ಲಾ ಬೋರ್ಡ್‌ಗಳ ವಿಚಾರದಲ್ಲಿ ಈ ರೀ ಯಾಗಿ ಪದೇ ಪದೇ ಅನಿವಾರ್ಯವಾಗಿ ಕೆಲವು ಮಸೂದೆಗಳು ಬರಲೇಬೇಕಾಗಿ ಬಂದಿವೆ. ಕಳೆದ ವರ್ಷ ಬೊಂಬಾಯಿನಿಂದ ಬಂಧಿರತಕ್ಕ ಭಾಗದ ಜಿಲ್ಲಾ ಬೋರ್ಡ್‌ಗಳ ಅಧಿಕಾರಾವಧಿಯನ್ನು ವಿಸ್ತರಿಸುವುದಕ್ಕೆಂದು ಒಂದು ಮಸೂದೆ ಬಂತು. ಆ ಹೊತ್ತು ಯಾವ ಪಾಡವನ್ನು ಮಾನ್ಯ ಸದಸ್ಯರು ಈ ಸಭೆಯ ಮುಂದಿಟ್ಟರೋ ಅದೇ ಪಾಡವನ್ನು ಇಂದೂ ಇಟ್ಟಿದ್ದಾರೆ. His master's voice ಎನ್ನುವಂತೆ ಅದೇ ದನಿ ಕೇಳಿಬಂತು. ಆದರೆ ಯಾಪುದು ಸಾಧ್ಯ, ಯಾವುದು ಸಾಧ್ಯವಲ್ಲ ಎಂಬುದನ್ನು ನೋಡಿ ನಾವು ಮಾಡಬೇಕಾಗಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಇನ್ನೂ ಹೆಚ್ಚಿಗೆ ಕಾಲಾವಕಾಶ ಕೊಟ್ಟು ನಾವು ಕೇಳಬೇಕೆಂದಿದ್ದೇವೆ. ನಾಳೆ ದಿವಸ ಅವರಿಗೆ ಇನ್ನೂ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು. ಇಂದು ಆರು ಘಂಟೆಯಾಗಿದೆ. ನಾಳೆಗೆ ಮುಂದುವರಿಸಿದರೆ ಒಳ್ಳೆಯದೆಂದು ನಾನು ಬೇಳಬಯಸುತ್ತೇನೆ.

Mr. CHAIRMAN.—There is some difficulty. The Business Advisory Committee had allotted two hours for the discussion of this Bill and it is put on today's agenda. We have not completed two hours. Now I will take the sense of the House whether we should sit and finish the Bill today or continue discussion on the Bill tomorrow. Before doing that I will ask the Government as to what is their view in the matter.

Sri R. CHENNIGARAMIAH.—We have no objection to continue discussion tomorrow.

Mr. CHAIRMAN.—If it is the wish of the House, then I think Hon'ble Members may continue discussion on the Bill tomorrow.

The House will now rise and re-assemble tomorrow morning at the usual hour 8-30 A.M.

The House adjourned at Five Minutes past Six of the Clock to meet again on Saturday, the 8th March 1958 at Thirty Minutes past Eight of the Clock.